₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXX -10 October 2012



ಅಸೋಸಿಯೇಷನ್‌ನಲ್ಲಿ ಸಂಭ್ರಮದ ಗಣೇಶೋತ್ಸವ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# 60ನೇ ವರ್ಷದ ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ





ಅಸೋಸಿಯೇಶನ್‌ನಲ್ಲಿ ಈ ವರ್ಷ 60ನೇ ವರ್ಷದ ಸ್ವರ್ಣಗೌರಿ ಮತ್ತು ಮಹಾಗಣಪತಿ ಪೂಜಾ ಮಹೋತ್ಸವವನ್ನು ಪ್ರತಿ ವರ್ಷಕ್ಕಿಂತ ಹೆಚ್ಚು ಅದ್ದೂರಿಯಾಗಿ ದಿನಾಂಕ 18.09.2012 ರಿಂದ ದಿನಾಂಕ 23.09.2012ರ ವರೆಗೆ ಆಚರಿಸಲಾಯಿತು. ಮಂಗಳವಾರ ದಿನಾಂಕ 18.09.2012ರ ಬೆಳಿಗ್ಗೆ 10.00 ಗಂಟೆಗೆ ಶ್ರೀಮತಿಯರಾದ ಲಕ್ಷ್ಮೀ ಸೀತಾರಾಮ್, ರಮಾ ವಸಂತ್, ಛಾಯಾ ನಾಗರಾಜ್, ಪದ್ಮ ರವಿ, ಸೌಮ್ಯ ಮತ್ತು ಇತರರು ಸೇರಿ ಶ್ರೀ ಸ್ವರ್ಣಗೌರಿಯ ಪ್ರತಿಷ್ಠಾಪನೆ ಮಾಡಿ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿದರು.

ಬುಧವಾರ ದಿನಾಂಕ 19.09.2012 ರಂದು ಶ್ರೀಮತಿ. ಪದ್ಮ ಮತ್ತು ಎ. ರವಿ ದಂಪತಿಯರು ಶ್ರೀ ಮಹಾಗಣಪತಿಯ ಪ್ರತಿಷ್ಠಾಪನೆ ಮಾಡಿ ಪೂಜೆ ಸಲ್ಲಿಸಿದರು.

ಶ್ರೀ ಸ್ವರ್ಣಗೌರಿ ಮತ್ತು ಮಹಾಗಣಪತಿ ಮಹೋತ್ಸವದ ಅಂಗವಾಗಿ ದಿನಾಂಕ 20.09.2012ರ ಗುರುವಾರ ಸಂಜೆ 7.00ಕ್ಕೆ ಯುವ ಕಲಾವಿದ ತೇಜಸ್ ಶೇಷಾದ್ರಿ ಸರ್ಮ ಅವರು ಕರ್ನಾಟಕ ಸಂಗೀತವನ್ನು ಸಾದರಪಡಿಸಿದರು. ಅವರಿಗೆ ಪಕ್ಕ ವಾದ್ಯದಲ್ಲಿ ವಿದುಷಿ. ಪೂರ್ಣಿಮ ಕೃಷ್ಣ ಮೃದಂಗದಲ್ಲಿ ಮತ್ತು ವೈಲಿನ್‌ನಲ್ಲಿ ವಿದ್ವಾನ್. ಶ್ರೀಕಾಂತ್ ಸಹಕರಿಸಿದರು.

ಅದೇ ದಿನ ಸಂಜೆ 8.00ಕ್ಕೆ ಯುವ ಕಲಾವಿದೆ ಎಮ್.ವಿ.ಎಸ್. ನಿಶಾ ಅವರು ಕರ್ನಾಟಕ ಸಂಗೀತವನ್ನು ಸಾದರಪಡಿಸಿದರು. ಅವರಿಗೂ ಪಕ್ಕ ವಾದ್ಯದಲ್ಲಿ ವಿದುಷಿ. ಪೂರ್ಣಿಮ ಕೃಷ್ಣ ಮೃದಂಗದಲ್ಲಿ ಮತ್ತು ವೈಲಿನ್‌ನಲ್ಲಿ ವಿದ್ವಾನ್. ಶ್ರೀಕಾಂತ್ ಸಹಕರಿಸಿದರು.

ಶುಕ್ರವಾರ ದಿನಾಂಕ 21.09.2012 ರಂದು ಮೊದಲಿಗೆ ಹೆಂಗಸರಿಗೆ ಅರಿಷಿಣ ಕುಂಕುಮ ಕಾರ್ಯಕ್ರಮವಿತ್ತು. ಅನಂತರ ಸಂಜೆ 7.00ಕ್ಕೆ ಶ್ರೀ. ಅಭಿಜಿತ್ ಶಣೈ ಬೆಂಗಳೂರು ಇವರಿಂದ ಹಿಂದೂಸ್ಥಾನಿ ಸಂಗೀತ ಕಛೇರಿಯನ್ನು ಏರ್ಪಡಿಸ ಲಾಗಿತ್ತು. ಇವರಿಗೆ ಪಕ್ಕ ವಾದ್ಯದಲ್ಲಿ ಆದರ್ಶ್‌ಶೆಣೈ ತಬಲದಲ್ಲಿ ಮತ್ತು ಸಚಿನ ಮೋರೆ ಹಾರ್ಮೋನಿಯಂನಲ್ಲಿ ಸಹಕರಿಸಿದರು.

ಶನಿವಾರ ದಿನಾಂಕ 22.09.2012ರಂದು ಸಂಜೆ 7.00ಕ್ಕೆ ಯುವ ಕಲಾವಿದೆ ಚಾರಿ ಕನಕವಲ್ಲಿ ಸಂತಾನಮ್ ಅವರು ಕರ್ನಾಟಕ ಸಂಗೀತವನ್ನು ಸಾದರಪಡಿಸಿದರು. ಅವರಿಗೆ ಪಕ್ಕ ವಾದ್ಯದಲ್ಲಿ ರೋಹಿತ್ ಪ್ರಸಾದ್ ಮೃದಂಗದಲ್ಲಿ ಮತ್ತು ವೈಲಿನ್‌ನಲ್ಲಿ ಸ್ಮೃತಿ ಸುಂದರ್‌ರಾಜನ್ ಸಹಕರಿಸಿದರು.

ಅದೇ ದಿನ ಸಂಜೆ 8.00ಕ್ಕೆ ಯುವ ಕಲಾವಿದೆ ಧಾರಿಣಿ ವೀರರಾಘವನ್ ಅವರು ಕರ್ನಾಟಕ ಸಂಗೀತವನ್ನು ಸಾದರಪಡಿಸಿದರು. ಅವರಿಗೆ ಪಕ್ಕ ವಾದ್ಯದಲ್ಲಿ ಸ್ಮೃತಿ ಸುಂದರ್‌ರಾಜನ್ ವೈಲಿನ್‌ನಲ್ಲಿ ಸಹಕರಿಸಿದರು.

ದಿನಾಂಕ 23.09.2012 ರ ಭಾನುವಾರ ಬೆಳಗಿನ 9.00ಗಂಟೆಯ ಪೂಜೆಯ ನಂತರ ಮಾಟುಂಗದ ಶಂಕರ ಮಠದ ಋತ್ವಿಕರುಗಳು ವೇದಘೋಷ ಪಠಿಸಿದರು. ಅನಂತರ ಅಸೋಸಿಯೇಶನ್‌ನ ಸದಸ್ಯರು ಭಜನೆ ಮಾಡಿ ಗಣಪತಿ ಮತ್ತು ಸ್ವರ್ಣಗೌರಿಯನ್ನು ಸ್ತುತಿಸಿದರು. ನಂತರ ಮಹಾಮಂಗಳಾರತಿಯೊಡನೆ ವಿಸರ್ಜನಾ ಪೂಜೆ ಮಾಡಿ ಸ್ವರ್ಣಗೌರಿ ಮತ್ತು ಮಹಾಗಣಪತಿಯನ್ನು ವಾಹನದಲ್ಲಿ ಜೈ ಘೋಷ ಮಾಡುತ್ತ ಮೆರವಣಿಗೆಯೊಡನೆ ದಾದರ್ ಸಮುದ್ರದಲ್ಲಿ ವಿಸರ್ಜಿಸಲಾಯಿತು. ನಂತರ ಪೂಜೆಯಲ್ಲಿ ಭಾಗವಹಿಸಿದ್ದ ಸದಸ್ಯರಿಗೆ ಮತ್ತು ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮಾಡಲಾಯಿತು.

–ವಿನೋದಾ ಎಸ್. ಭಂಡಾರಿ





ಗೌ. ಸಂಪಾದಕರು :

**ಡಾ. ಗಿರಿಜಾ ಶಾಸ್ತ್ರಿ**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

# ನೇಸರು

## ತಿಂಗಳೋಲೆ

**ಸಂಪುಟ 30** **ಅಕ್ಟೋಬರ್ 2012** **ಸಂಚಿಕೆ 9**

## ಸಮುದ್ರ ಮುಖಿ

"ನೋಡಿ, ಫಿಸಿಕ್ಸ್ ಪ್ರಕಾರ, ನಾನು ಹೀಗೆ ಒಂದು ಬೆರಳನ್ನೆತ್ತಿದಾಕ್ಷಣ ವಿಶ್ವದ ಚಲನೆಯಲ್ಲಿ ಏನನ್ನೋ ಬದಲಾವಣೆ ಮಾಡುತ್ತಿರುತ್ತೇನೆ", ಚಿತ್ತಾಲರು ತಮ್ಮ ತೋರು ಬೆರಳನ್ನೆತ್ತಿ ಅಭಿನಯ ಪೂರ್ವಕ ತೋರಿಸುವಾಗ ನನ್ನೊಳಗೆಲ್ಲಾ ಜುಂ ಎಂದಿತು. ಅವರ ಮಾಗಿದ ವಯಸ್ಸು, ವಿಷಯದ ಗಾಂಭೀರ್ಯ ಅವರ ಅಂಗ ಭಾವಗಳಲ್ಲಿ ವ್ಯಕ್ತವಾಗುತ್ತಾ ಅವರ ಕಣ್ಣುಗಳಲ್ಲಿ ಪ್ರತಿಫಲನ ಗೊಳ್ಳುತ್ತಿರುವಾಗ, ಅವರ ಎದುರಿಗೆ ಕುಳಿತು ಈ ಮಾತುಗಳನ್ನು ಕೇಳುತ್ತಿರುವ ವ್ಯಕ್ತಿ ನಾನೇ? ಎನ್ನುವ ವಿಸ್ಮಯ ಆವರಿಸತೊಡಗಿತು. ಅಣುವಿನ ಮಹತ್ತನ್ನು ಕುರಿತು ಮಾತನಾಡುತ್ತಿರುವಂತೆ ತೋರಿತು. ಮಹತ್ತಿನ ಚಲನೆಯಲ್ಲಿ ಅಣುವಿನ ಪಾತ್ರ ಎಂಥ ಮಹತ್ತರವಾದದ್ದು, ಅಣುವಿನೊಳಗೆ 'ಮಹತ್ತು' ಹೊಕ್ಕು, ಮಹತ್ತಿನೊಳಗೆ 'ಅಣು' ಸಂಚರಿಸಿ ವಿಶ್ವದ ವೃತ್ತಾಂತವನ್ನು ಪೂರ್ಣವಾಗಿಸುವ ಬಗೆ ಬೆರಗುಹುಟ್ಟಿಸುವಂತಹದ್ದು. ಇಂತಹ ಬೆರಗಿಗೆ ಅರಬ್ಬಿ ಕಡಲು ಹಿನ್ನೆಲೆ ಒದಗಿಸಿತ್ತು. ಇದಕ್ಕೆ ಪೂರಕವಾಗಿ ಚಿತ್ತಾಲರು ತಮ್ಮ ಹೊಸದೊಂದು ಕತೆಯ ಹಿಂದಿರುವ ಪರಿಕಲ್ಪನೆಯನ್ನು ಪರಿಚಯಮಾಡಿಕೊಟ್ಟರು. ಅದು ಒಂದು ವೃತ್ತದೊಳಗೆ ಸಮದೂರದಲ್ಲಿ ಇಬ್ಬರು ಚಲಿಸುತ್ತಿರುವ / ಸುತ್ತುತ್ತಿರುವ ಕಥೆ. "who is chasing whom? "ಎಂದರು. ಅರೆ! ಹೌದಲ್ಲಾ ಯಾರ ಹಿಂದೆ ಯಾರು? ಅಥವಾ ಯಾರು ಮುಂದೆ, ಯಾರು ಹಿಂದೆ? ಪ್ರತಿಯೊಬ್ಬರೂ ಏಕ ಕಾಲಕ್ಕೆ ಹಿಂದೆ ಹಾಗೂ ಮುಂದೆ ಇದ್ದಾರೆ ! ಹೀಗಾಗಿ ಇಬ್ಬರಿಗೂ ತಮ್ಮ ಹಿಂದೆಯೂ ಕಾಣುವುದಿಲ್ಲ ಮುಂದೆಯೂ ಕಾಣುವುದಿಲ್ಲ. 'ಹಿಂದಣ ಹೆಜ್ಜೆಯ ಅರಿವಿ'ಲ್ಲ, 'ಮುಂದಣ ಅನಂತ'ದ ಪರಿವೆಯಿಲ್ಲ. ಹಿಂದಣ ಹೆಜ್ಜೆಯ ಅಭಿಜ್ಞಾನವಾದರೆ ಮುಂದಿನ ಕಾಣ್ಕೆ ಕೃಪೆತೋರಬಹುದು. ಇದು ಒಂದು ರೀತಿಯ 'ಸ್ವ'ದ ಸುತ್ತಲೇ ಹೊಡೆಯುವ ಗಿರಕಿ. ನಮ್ಮ ಒಂದು ಸಣ್ಣ ಭೌತಿಕ ಚಲನೆಯೂ ವಿಶ್ವದ ಚಲನೆಯಲ್ಲಿ ಕಂಪನವುಂಟುಮಾಡಲು ಸಾಧ್ಯವಿರುವಾಗ, 'ನಾ ತೊಟ್ಟ ದೇಹಗಳ' ವಿಸ್ಮೃತಿಗೆ ಸಂದಿರುವ ಎಷ್ಟೆಲ್ಲಾ ಚಲನೆಗಳು 'ವೃಥಾ ಹೋಗಲು' ಹೇಗೆ ಸಾಧ್ಯ? ನನ್ನಂಗ, ಮನೋ ಚೇಷ್ಟೆಗಳಿಗೆ ನಾನು ಭಾದ್ಯಸ್ಥಳಾಗುವುದಿಲ್ಲವೆಂದರೆ ಹೇಗೆ? ಹಿನ್ನಡೆ, ಮುನ್ನಡೆಗೆ ಕಾರಣವಾದರೆ ಮುನ್ನಡೆಗೆ, ಹಿನ್ನಡೆ ಕಾರಣ, ಈ ವೃತ್ತಾಂತದಲ್ಲಿ 'ನಡೆ' ಅಥವಾ ಚಲನೆ ಮಾತ್ರ ಶಾಶ್ವತವಾದದ್ದು (ನಿತ್ಯವಾದದ್ದು), ಅದರ ಹಿಂದು ಮುಂದುಗಳಲ್ಲ. ವೃತ್ತದ ಚಲನೆಯ ಜೊತೆಗೆ ಹಿಂದು ಮುಂದಾಗುವ ಅವು ಎಂದೂ ಸಾಪೇಕ್ಷವಾದವು. ಕಾಲದ ಚಲನೆಯ ಜೊತೆಗೆ ಚಲಿಸುತ್ತ ಚಲಿಸುತ್ತಾ ಅವು ವೃತ್ತದ ಪರಿಧಿಯಾಚೆಗೆ ಹಾರಿಬಿಡುವಂತಹವು. ದುರಂತವೆಂದರೆ ನಮಗೆ ಈ ಪರಿಭ್ರಮಣೆಯ ಅರಿವೇ ಆಗದಿರುವುದು. ಕೇಂದ್ರದಿಂದ ಪರಿಧಿಗೆ, ಪರಿಧಿಯಿಂದ ಮತ್ತೆ ಕೇಂದ್ರಕ್ಕೆ ಚಲಿಸುವ ಅರಿವು ಗೋಚರಿಸದಿರುವುದು ಮನುಷ್ಯಜಾತಿಯ ಮಿತಿ.

ಯಾವುದೇ ಒಂದು ಕಲೆಯ (ಕಾದಂಬರಿ) ಪರಿಕಲ್ಪನೆಯೂ ಈ ಕೇಂದ್ರ ವೃತ್ತಾಂತವೇ ಆಗಿರುತ್ತದೆ ಎಂಬುದು ಚಿತ್ತಾಲರ ನಂಬುಗೆ. ಇದೊಂದು 'ಆಟ'. ಈ 'ಆಟ'ದೊಳಗೆ ಸಾವೂ ಒಂದು ಭಾಗವಾಗಿರುತ್ತದೆ, ಎಂಬ ಅರಿವೇ ಉಂಟಾಗದ 'ಆಟ'ವಿದು, ಎಂದು ಚಿತ್ತಾಲರು ತಮ್ಮ 'ಆಟ' ಕತೆಯ ಕುರಿತು ಹೇಳಿದಾಗ, ಬೇಂದ್ರೆಯವರ 'ನಾದಲೀಲೆ' ಹೇಳುವುದೂ ಇದನ್ನೇ ಅಲ್ಲವಾ ಸರ್ ಎಂದದ್ದಕ್ಕೆ ಹೌದೆಂದು ತಲೆಯಲ್ಲಾಡಿಸಿದರು.

ದೂರದಿಂದ ಬಂದಿದ್ದ ವಸುಧೇಂದ್ರ ಅವರು ಚಿತ್ತಾಲರನ್ನು ನೋಡಲು ಬಯಸಿದಾಗ ಸೃಜನಾದ ಗೆಳತಿಯರಾದ ನಾವೂ ಕೆಲವರು ಅವರನ್ನು ಸೇರಿಕೊಂಡೆವು. ಮಿತ್ರಾ ವೆಂಕಟ್ರಾಜ್ ಅವರ ಸಾರಥ್ಯದಲ್ಲಿ ಚಿತ್ತಾಲರ ಮನೆಗೆ ಹೋದಾಗ, ಎದುರಿನ ಸಮುದ್ರದೊಳಕ್ಕೆ ಸಂಜೆ ಇಳಿಯುತ್ತಿತ್ತು. ಚಿತ್ತಾಲರು ಸಮುದ್ರಮುಖಿಯಾಗಿಯೇ ಕುಳಿತು ಯಾಕೆ ಯಾವಾಗಲೂ ತಮ್ಮ ಕೃತಿಗಳನ್ನು ಬರೆಯುತ್ತಾರೆ ! ಎನ್ನುವ ವಿಸ್ಮಯಕ್ಕೆ ಸಮುದ್ರವೇ ಉತ್ತರ ಕೊಡುತ್ತದೆ. ವಿಸ್ಮಯಕ್ಕೆ ವಿಸ್ಮಯವೇ ಉತ್ತರವೆನ್ನುವ ಹಾಗೆ!

"ಎಲ್ಲರೂ ನಾನೇ 'ನಾಗಪ್ಪ' ಎಂದು ತಿಳಿದುಕೊಂಡಿದ್ದಾರೆ. ಆದರೆ ನೋಡಿ, ನಾಗಪ್ಪ'ನಿಗೆ ಕೈಮೇಲೆ ಸುಟ್ಟ ಕಲೆಯಿತ್ತು, ನನಗಿದೆಯಾ" ಎಂದು ಕೈಮೇಲೆ ಮಾಡಿ ತೋರಿಸಿದರು. ಅದಕ್ಕೆ ನಾನು, "ಯಾಕಾಗಬಾರದು ನೀವು ಕೊಲಾಜ್ ಮಾಡಿರಬಹುದು. ಇಸ್ಕಿ ಟೋಪಿ ಉಸ್ಕಾ ಸರ್?" ಲೇಖಕ ಮಾಡುವುದು ಇದನ್ನೇ ತಾನೇ? ಚಿತ್ತಾಲರ ಜೊತೆ ಎಲ್ಲರೂ ಭರಪೂರ ನಕ್ಕೆವು. ಚಿತ್ತಾಲರು ಕೃತಿಯ ರೂಪಕ್ಕೆ (form) ಹೆಚ್ಚು ಗಮನಕೊಡುತ್ತಾರೆನ್ನುವ ವಸುಧೇಂದ್ರರ ಪ್ರಶ್ನೆಗೆ, form ಮತ್ತು contentನ್ನು ಬೇರ್ಪಡಿಸಲು ಸಾಧ್ಯವಿಲ್ಲವೆಂದು ಉತ್ತರಿಸಿದರು. ಅವರು ಮುಂದುವರೆಯುತ್ತಾ, 'ತೆಂಗಿನ ಮರದ' ಮೇಲೆ ಪ್ರಬಂಧ ಬರೆಯಬಹುದೇ ಹೊರತು ಕತೆಯನ್ನಲ್ಲ. ಕತೆಯನ್ನುವುದು ಪ್ರತಿಮೆಯೊಳಗಿಂದಲೇ ಹುಟ್ಟಿಬರುವಂತಹುದು ಎಂದರು. ಈ ಪ್ರತಿಮೆಯೇ ತನ್ನ form ನ್ನೂ ಹುಡುಕಿಕೊಳ್ಳುತ್ತದೆ ಎಂಬುದೂ ನಿಜವಲ್ಲವೇ?

"ನೀವು ಯಾರನ್ನೂ ಅಥವಾ ಯಾವ ಹುಡುಗಿಯೂ, ನಿಮ್ಮನ್ನು ಲವ್ ಮಾಡಲಿಲ್ಲವೇ ಸಾರ್"–ಎನ್ನುವ ನನ್ನ ಧಾರ್ಷ್ಟ್ಯದ, ಚೇಷ್ಟೆಯ ಪ್ರಶ್ನೆಗೆ ಕೋಪಗೊಳ್ಳದೇ, ತಾವು ಪ್ರೇಮಿಸಿದ ಸಂಬಂಧಿಕಳನ್ನೇ ಹೆಂಡತಿಯನ್ನಾಗಿ ಪಡೆದುದರ ಬಗ್ಗೆ ಬಹಳ ರೊಮ್ಯಾಂಟಿಕ್ ಆಗಿ ಉತ್ತರಿಸಿದರು. ಕಂಠ ಭರ್ತಿ ಪ್ರೀತಿಯಿಂದ ತಿನ್ನಿಸಿದರು.

ಸಮುದ್ರಕ್ಕೆ ಅಂದು low tide. "ಸರ್ ನಿಮ್ಮ ಸಮುದ್ರಕ್ಕೆ ಭರತ ಇಳಿದಿದೆ" ಎಂದೆ, ನಕ್ಕರು. ಚಿತ್ತಾಲರು ಕುಗ್ಗಿದ್ದಾರೆ ನಿಜ, ವೃದ್ಧಾಪ್ಯದ ಅಸಹಾಯಕತೆ ಅವರನ್ನು ಕಾಡುತ್ತಿದೆ, ಆದರೆ ನಮ್ಮನ್ನು ಕಂಡ ಅವರ ಉತ್ಸಾಹ, ಹೊಸ ಕತೆಯನ್ನು ಹೇಳುವ ಉಮೇದು, ಓದುವ ಹುಮ್ಮಸ್ಸು ಇವು ಯಾವಕ್ಕೂ ಕಾಲದ ಛಾಪು ಮೂಡಿಲ್ಲ.

**– ಡಾ. ಗಿರಿಜಾ ಶಾಸ್ತ್ರಿ**

# ಗಾಂಧಿ ಬಾಂಧವ್ಯ

ನದೀಮೂಲ, ಋಷಿಮೂಲ ಹುಡುಕಬಾರದೆಂಬ ರೀತಿನೀತಿಯ ಕಾರಣದಿಂದಲೋ ಏನೋ, ಒಟ್ಟಲ್ಲಿ ಗಾಂಧಿ ಎಂದೊಡನೆ ಇಂದು ಜನಮಾನಸದಲ್ಲಿ ಮೂಡುವುದು ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಅವರ ಚಿತ್ರವೇ ಹೊರತು, ಆ ವಿಖ್ಯಾತ ನಾಮದ ಮತ್ತಾವ ಬಿಂಬವೂ ಅಲ್ಲ. ಆದರೆ, ಗಾಂಧಿ ನಾಮದ ಮೂಲವನ್ನೇ ನಾದರೂ ಆಸಕ್ತಿಯಿಂದ ಕೆದಕಲು ಹೊರಟರೆ, ಬಹಳಷ್ಟು ಸ್ವಾರಸ್ಯಕರ ಸಂಗತಿಗಳು ಹೊರಬರುತ್ತವೆ. ಗಾಂಧಿ ಎಂಬುವ ಪದ ಗಂಧ ಎಂಬ ಶಬ್ದದಿಂದ ಬಂದಿದ್ದು, ಗಂಧದ ವ್ಯಾಪಾರಿಗಳನ್ನು ಹೀಗೆ ಕರೆಯುತ್ತಿದ್ದರೆಂಬುದನ್ನು ತಿಳಿದು ಶುರುವಿನಲ್ಲೇ ಅಚ್ಚರಿಯಾಗುತ್ತದೆ. ಹಾಗೆಯೇ ಮುಂದುವರಿದರೆ, ಗಾಂಧಿಗೆ ಮುಂಚೆಯೇ ಇನ್ನೊಬ್ಬ ವಿಶ್ವವಿಖ್ಯಾತ ಗಾಂಧಿ ಇದ್ದರೆಂದು ತಿಳಿದು ಕುತೂಹಲ ಮತ್ತಷ್ಟು ಕೆರಳುತ್ತದೆ. ಇವರೇ ಮಹಾತ್ಮ ಗಾಂಧೀಜಿಯವರು ತಮ್ಮ spiritual guru ಮತ್ತು Mentor ಎಂದು ಭಾವಿಸಿದ್ದ, ವೀರ್‌ಚಂದ್ ರಾಘವ್‌ಜೀ ಗಾಂಧಿ (೧೮೮೪–೧೯೦೧). ಇವರು ಬ್ಯಾರಿಸ್ಟರ್ ಮತ್ತು ಬಹುಧರ್ಮ ವಿದ್ವಾಂಸರು; ಅಮೆರಿಕಾಗೆ ಭೇಟಿಕೊಟ್ಟ (೧೮೯೩) ಮೊತ್ತಮೊದಲ ಗುಜರಾತಿ. ಸ್ವಾಮಿ ವಿವೇಕಾನಂದರು ಇತಿಹಾಸ–ಪ್ರಸಿದ್ಧವಾಗಿಸಿದ ೧೮೯೩ರ ವಿಶ್ವಧರ್ಮಗಳ ಪಾರ್ಲಿಮೆಂಟ್‌ನಲ್ಲಿ ವೀರ್‌ಚಂದ್ ಗಾಂಧಿ ಅವರು ಜೈನ ಧರ್ಮದ ಪ್ರತಿನಿಧಿಯಾಗಿ ಮನಮೋಹಕ ಉಪನ್ಯಾಸವನ್ನು ನೀಡಿದರು, ಮತ್ತು ಅಮೆರಿಕಾ, ಯೂರೋಪ್‌ಗಳಲ್ಲಿ ೫೦೦ಕ್ಕೂ ಹೆಚ್ಚು ಸಭೆಗಳಲ್ಲಿ ಭಾಷಣ ಮಾಡಿದರು. ಇವರ ಪ್ರಭಾವದಿಂದಾಗಿ ಷಿಕಾಗೋದ ಶ್ರೀ ಮತ್ತು ಶ್ರೀಮತಿ ಹವರ್ಡ್ ಅಮೆರಿಕಾದ ಪ್ರಥಮ ಜೈನ ಮತಾಂತರಿಗಳಾದರು.

ಇದೇ ಶೋಧದಲ್ಲಿ ಮೋಹನ್‌ದಾಸ್ ಗಾಂಧಿ ಅವರ ಕುಟುಂಬದೆಡೆಗೇ ಹೊರಳಿದರಂತೂ, ಆ ಸುತ್ತಲಲ್ಲೇ ಇದ್ದ ಅನೇಕ ಅಜ್ಞಾತ ಗಾಂಧಿ – ನಾಮಧಾರಿಗಳು ಥಟ್ಟನೆ ಪ್ರತ್ಯಕ್ಷರಾಗಿ, ಏನೀ ಇತಿಹಾಸದ ಮಾಯೆ! ಎನಿಸುತ್ತದೆ. ಇವರಲ್ಲಿ ಮುಂಚೆಯೇ ಕಾಣಸಿಗುವವರು ಮೋಹನ್‌ದಾಸ್ ಗಾಂಧಿ ಅವರ ಅಕ್ಕ ರಲಿಯತ್ (ಜನನ: ೧೮೬೨), ಅನಂತರ ಅವರ ಇಬ್ಬರು ಅಣ್ಣಂದಿರಾದ ಲಕ್ಷ್ಮೀದಾಸ್ (ಜನನ: ೧೮೬೩) ಮತ್ತು ಕರ್ಸನ್ (ಕೃಷ್ಣ) ದಾಸ್ (ಜನನ: ೧೮೬೭). ಮೋಹನ್‌ದಾಸ್‌ರ ತಂದೆ ದಿವಾನ್ ಕರಮ್‌ಚಂದ್ ಉತ್ತಮ್‌ಚಂದ್ ಗಾಂಧೀ (ಕಾಬಾ ಗಾಂಧಿ) ಅವರಿಗೆ, ಪುತಲೀಬಾಯಿ ಅವರು ನಾಲ್ಕನೆಯ ಪತ್ನಿಯಾಗಿದ್ದರು. ಅವರ ಮೊದಲಿನ ಮೂವರು ಪತ್ನಿಯರಲ್ಲಿ ಇಬ್ಬರಿಗೆ ಮಾತ್ರ ಮಕ್ಕಳಾಗಿತ್ತು: ಒಬ್ಬರಿಗೆ ಮುಲೀ ಎಂಬ ಹೆಣ್ಣುಮಗು, ಇನ್ನೊಬ್ಬರಿಗೆ ಪನ್‌ಕುನ್ವರ್ ಎಂಬ ಹೆಣ್ಣುಮಗು. ಹೀಗಾಗಿ ಮೋಹನ್‌ದಾಸ್‌ರಿಗೆ ಇಬ್ಬರು ಬಲ–ಅಕ್ಕಂದಿರಿದ್ದರು. ಒಟ್ಟಲ್ಲಿ ಮೋಹನ್‌ದಾಸ್‌ರು ಕಡೆಯ ಮಗುವಾಗಿ, ಕುಟುಂಬದ ವಿಶೇಷ ಪ್ರೀತಿಗೆ ಪಾತ್ರರಾಗಿದ್ದರು; ಎಲ್ಲರೂ ಅವರನ್ನು ಮೋನಿಯಾ ಎಂದೇ ಕರೆಯುತ್ತಿದ್ದರು.



ಚಿತ್ರದಲ್ಲಿ ವೀರ್‌ಚಂದ್ ರಾಘವ್‌ಜೀ ಗಾಂಧಿ, ಧರ್ಮಪಾಲ್, ಸ್ವಾಮಿ ವಿವೇಕಾನಂದರು

ಮುಂದೆ, ರಲಿಯತ್ ಅವರ ಪತಿ ರಾಜ್‌ಕೋಟ್‌ನಲ್ಲಿ ಚಿಕ್ಕ ವಯಸ್ಸಿನಲ್ಲೇ ಮೃತರಾದ ಮೇಲೆ, ಅವರ ಒಬ್ಬನೇ ಮಗ ೧೦ ವರ್ಷದ ಗೋಕುಲ್‌ದಾಸ್‌ನನ್ನು ಮೋಹನ್‌ದಾಸ್‌ರು ದಕ್ಷಿಣ ಆಫ್ರಿಕಾಕ್ಕೆ ತಮ್ಮ ಎರಡು ಗಂಡುಮಕ್ಕಳೊಡನೆ ಕರೆದೊಯ್ದರು. ಮತ್ತು ಅಣ್ಣ ಲಕ್ಷ್ಮೀದಾಸ್‌ರು ಮೋಹನ್‌ದಾಸ್‌ರನ್ನು ಇಂಗ್ಲೆಂಡ್‌ಗೆ ಕಳುಹಿಸಲು ಹಾಗೂ ವಕೀಲರನ್ನಾಗಿಸಲು ಮುಖ್ಯ ಕಾರಣರಾದರು. ಆದರೆ, ಕಾಲಾಂತರದಲ್ಲಿ, ಕುಟುಂಬ ನಿರ್ವಹಣೆಯ ವಿಚಾರದಲ್ಲಿ ಲಕ್ಷೀದಾಸ್–ಮೋಹನ್‌ದಾಸ್‌ರ ನಡುವೆ ಭಿನ್ನಾಭಿಪ್ರಾಯ ಬಂದು, ಲಕ್ಷೀದಾಸ್‌ರ ಅಂತ್ಯಕಾಲದಲ್ಲಷ್ಟೆ ಈ ಸೋದರರ ನಡುವೆ ಸಂಧಾನವಾಯಿತು.

ಇನ್ನು ಕಸ್ತೂರ್‌ಬಾ ಅವರ ಬಾಲ್ಯದತ್ತ ತಿರುಗಿದರೆ, ಅವರ ತಂದೆ ಗೋಕುಲ್‌ದಾಸ್ ಮಕನ್‌ಜಿ ಕಪಾಡಿಯಾ ಅವರು ಪೋರ್‌ಬಂದರ್‌ನಲ್ಲಿ ಶ್ರೀಮಂತ ಬನಿಯಾ ವರ್ತಕರಾಗಿದ್ದರು. ಕಸ್ತೂರ್‌ಬಾ ಅವರು ಮೋಹನ್‌ದಾಸ್‌ರಿಗಿಂತ ಆರು ತಿಂಗಳು (೧೦ ಏಪ್ರಿಲ್ ೧೮೬೯) ದೊಡ್ಡವರಾಗಿದ್ದರು ಮತ್ತು ಇಬ್ಬರಿಗೂ ಸುಮಾರು ಏಳು ವರ್ಷ ವಯಸ್ಸಾಗಿರುವಾಗಲೇ ವಿವಾಹ ನಿಶ್ಚಿತಾರ್ಥವಾಗಿತ್ತು. ಇದಕ್ಕೆ ಮುಂಚೆ ಮೋಹನ್‌ದಾಸ್‌ರಿಗೆ ಇನ್ನಿಬ್ಬರು ಪುಟ್ಟ ಹುಡುಗಿಯರೊಡನೆ ವಿವಾಹ ನಿಶ್ಚಯವಾಗಿದ್ದರೂ, ಆ ಇಬ್ಬರೂ ವಿವಾಹಕ್ಕೆ ಮುಂಚೆಯೇ ತೀರಿಕೊಂಡಿದ್ದರು. ಮೋಹನ್‌ದಾಸ್–ಕಸ್ತೂರ್‌ಬಾ ವಿವಾಹ ಮೇ ೧೮೮೨ರಲ್ಲಿ (ಅಂದರೆ ಇಬ್ಬರಿಗೂ ಸುಮಾರು ೧೩ ವರ್ಷ ವಯಸ್ಸಾಗಿರುವಾಗ) ಅಣ್ಣ ಕರ್ಸನ್‌ದಾಸ್‌ರ ಮತ್ತು ಒಬ್ಬ ಸೋದರಸಂಬಂಧಿಯ ವಿವಾಹಗಳೊಟ್ಟಿಗೆ ಪೋರ್‌ಬಂದರ್‌ನಲ್ಲಿ ಜರುಗಿತು.

ತರುವಾಯ ಮೋಹನ್‌ದಾಸ್–ಕಸ್ತೂರ್‌ಬಾ ದಂಪತಿಗಳಿಗೆ ಹರಿಲಾಲ್ (೧೮೮೮–೧೯೪೮), ಮಣಿಲಾಲ್ (೧೮೯೨–೧೯೫೬), ರಾಮ್‌ದಾಸ್ (೧೮೯೬–೧೯೬೯) ಮತ್ತು ದೇವ್‌ದಾಸ್ (೧೯೦೦–೧೯೫೭) ಎಂಬ ನಾಲ್ಕು ಗಂಡು ಮಕ್ಕಳಾದರು. ಇಸ್ಲಾಂಗೆ ಪರಿವರ್ತಿತರಾಗಿ, ಬಳಿಕ ಹಿಂದೂ ಧರ್ಮಕ್ಕೇ ಮರಳಿ, ಹಲವಾರು ವ್ಯಸನಗಳಿಗೀಡಾಗಿ, ತಂದೆಯ ಅಂತ್ಯಕ್ರಿಯೆಗೂ ಅನರ್ಹರೆಂದೆನಿಸಿಕೊಂಡು, ಕಡೆಗೆ ಮುಂಬೈನ ಮುನಿಸಿಪಲ್ ಆಸ್ಪತ್ರೆಯೊಂದರಲ್ಲಿ ಅನಾಥ

✍ ಎಸ್. ಜಿ. ಸೀತಾರಾಮ್
c_ta_ram@yahoo.co.in

ಶವವಾಗಿ ಅಳಿದುಹೋದ ಹರಿಲಾಲ್‌ರ ದುರಂತ ಆತ್ಮವೃತ್ತ ಈಗ ಸಾಕಷ್ಟು ಜನಜನಿತ. ಹರಿ ಲಾಲ್‌ರ (ಪತ್ನಿ: ಗುಲಾಬ್) ಮಗ ಕಾಂತಿಲಾಲ್ ಮೈಸೂರು ಮೆಡಿಕಲ್ ಕಾಲೇಜಿನಿಂದ ೧೯೩೮ರಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದು, ಕೊನೆಗೆ ಪುಣೆಯ ಬಳಿ ಬಡರೋಗಿಗಳಿಗಾಗಿ ಒಂದು ಆರೋಗ್ಯಧಾಮವನ್ನು ನಡೆಸಿದರು. ಹರಿಲಾಲ್‌ರ ಹಿರಿಯ ಮಗಳು ರಾಮಿ ಬೆಹನ್ ಅವರ ಮಗಳು ನೀಲಂ ಪಾರೀಖ್ "ಗಾಂಧೀಜೀಸ್ ಲಾಸ್ಟ್ ಜೂಅಲ್: ಹರಿಲಾಲ್ ಗಾಂಧಿ" ಎಂಬ ಪುಸ್ತಕವನ್ನು ಬರೆದಿದ್ದಾರೆ.

ಎರಡನೆಯ ಮಗ ಮಣಿಲಾಲ್‌ರು ದಕ್ಷಿಣ ಆಫ್ರಿಕಾದಲ್ಲೇ ಇದ್ದು, ಡರ್ಬಾನ್‌ನ ಫೀನಿಕ್ಸ್ ಆಶ್ರಮವನ್ನೂ, ಇಂಡಿಯನ್ ಒಪೀನ್ಯನ್ ಪತ್ರಿಕೆಯನ್ನೂ ನಡೆಸಿದರು, ಮತ್ತು ವರ್ಣಭೇದ ನೀತಿಯ ವಿರುದ್ಧ ಹೋರಾಡಿದರು. ಮಣಿಲಾಲ್‌ರ (ಪತ್ನಿ: ಸುಶೀಲಾ) ಮಗಳು ಸೀತಾ ಅವರ ಮಗಳಾದ ಉಮಾ ಧುಪೇಲಿಯಾ ಮೆಸ್ತ್ರೀ ಅವರು "ಗಾಂಧೀಸ್ ಪ್ರಿಸ್ನರ್? ದಿ ಲೈಫ್ ಆಫ್ ಗಾಂಧೀಸ್ ಸನ್ ಮಣಿಲಾಲ್" ಎಂಬ ಪುಸ್ತಕವನ್ನು ಬರೆದಿದ್ದಾರೆ. ಮಣಿಲಾಲ್‌ರ ಮಗ ಅರುಣ್ (ಪತ್ನಿ ಸುನಂದಾ ಅವರೊಡನೆ ಬರೆದ ದ ಫರ್‌ಗಾಟನ್ ವುಮನ್: ದ ಅನ್‌ಟೋಲ್ಡ್ ಸ್ಟೋರಿ ಆಫ್ ಕಸ್ತೂರ್, ದ ವೈಫ್ ಆಫ್ ಮಹಾತ್ಮಾ ಗಾಂಧಿ, ಇವರ ಅನೇಕ ಪುಸ್ತಕಗಳಲ್ಲೊಂದು) ಮತ್ತು ಅರುಣ್‌ರ ಮಗ ತುಷಾರ್ ("ಲೆಟ್ಸ್ ಕಿಲ್ ಗಾಂಧಿ" ಎಂಬ ಪುಸ್ತಕದ ಲೇಖಕರು, ಮತ್ತು ಕಲಾವಿದರು) ಇಬ್ಬರೂ ಸಕ್ರಿಯ ಸಾಮಾಜಿಕ-ರಾಜಕೀಯ ಹೋರಾಟಗಾರರು. ಮಣಿಲಾಲ್‌ರ ಮಗಳು ಇಳಾ ದಕ್ಷಿಣ ಆಫ್ರಿಕಾದ ಪಾರ್ಲಿಮೆಂಟ್‌ನ ಸದಸ್ಯೆಯಾಗಿದ್ದರು; ಇಳಾ ಅವರ ಮಗ ಕುಶ್ ಯುವವಯಸ್ಸಿನಲ್ಲೇ ವರ್ಣಭೇದ-ವಿರುದ್ಧ ಚಳುವಳಿಯಲ್ಲಿ ಹತರಾದರು.

ಮೂರನೆಯ ಮಗ ರಾಮ್‌ದಾಸ್‌ರು ತಂದೆಯೊಡನೆ ಭಾರತದಲ್ಲೇ ಸ್ವಾತಂತ್ರ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ರಾಮ್‌ದಾಸ್‌ರ (ಪತ್ನಿ: ನಿರ್ಮಲಾ) ಮಗಳು ಸುಮಿತ್ರಾ ಕುಲಕರ್ಣಿ ನಿವೃತ್ತ ಐ.ಎ.ಎಸ್. ಅಧಿಕಾರಿ ಮತ್ತು ಮಾಜಿ ರಾಜ್ಯಸಭಾ ಸದಸ್ಯೆ. ಇವರು "ಮಹಾತ್ಮಾ ಗಾಂಧಿ: ಮೇರೇ ಪಿತಾಮಹ್" ಎಂಬ ಪುಸ್ತಕವನ್ನು ಬರೆದಿದ್ದಾರೆ. ಈಗ ಬೆಂಗಳೂರಿನಲ್ಲಿ ನೆಲಸಿದ್ದಾರೆ.

ಕೊನೆಯ ಮಗ ದೇವ್‌ದಾಸ್‌ರು ದಿಲ್ಲಿಯ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ಕಾರ್ಯ ನಿರ್ವಾಹಕ ಸಂಪಾದಕರಾಗಿದ್ದರು. ಅವರಿಗೆ ರಾಜಾಜಿ ಅವರ ಎರಡನೆಯ ಮಗಳು ಲಕ್ಷ್ಮೀ ಅವರೊಡನೆ ವಿವಾಹವಾಗಿತ್ತು. ದೇವ್‌ದಾಸ್‌ರ ಮಕ್ಕಳಲ್ಲಿ ರಾಜ್‌ಮೋಹನ್ ಗಾಂಧಿ (ಸಂಶೋಧಕ-ಪ್ರಾಧ್ಯಾಪಕರು, ಲೇಖಕರು, ಉಪನ್ಯಾಸಕರು, ರಾಜ್ಯಸಭೆಯ ಮಾಜಿ ಸದಸ್ಯರು, ಮಾನವೀಯ ಸುಧಾರಣೆಗಳ ಸಕ್ರಿಯ ಪ್ರತಿಪಾದಕರು ಮತ್ತು "ಮೋಹನ್‌ದಾಸ್: ಎ ಟ್ರೂ ಸ್ಟೋರಿ ಆಫ್ ಎ ಮ್ಯಾನ್, ಹಿಸ್ ಪೀಪಲ್ ಆ್ಯಂಡ್ ಆ್ಯನ್ ಎಂಪೈರ್" ಎಂಬ ಮಹತ್ವದ ಪುಸ್ತಕದ ಕರ್ತೃ); ಗೋಪಾಲ್‌ಕೃಷ್ಣ ಗಾಂಧೀ (ಭೂತಪೂರ್ವ- ಐ.ಎ.ಎಸ್. ಅಧಿಕಾರಿ, ರಾಯಭಾರಿ, ಪಶ್ಚಿಮ ಬಂಗಾಳದ ರಾಜ್ಯಪಾಲರು, ಮತ್ತು ಸಾಂಸ್ಕೃತಿಕ-ಬೌದ್ಧಿಕ ವಲಯಗಳಲ್ಲಿ ಪ್ರತಿಷ್ಠಿತರು) ಹಾಗೂ ರಾಮ್‌ಚಂದ್ರ ಗಾಂಧಿ (ತತ್ತ್ವಶಾಸ್ತ್ರಜ್ಞರು) ಅವರು ಚಿಂತಕರ ವೇದಿಕೆಗಳಲ್ಲಿ ಗಣ್ಯನಾಮ ರಾಗಿದ್ದಾರೆ.

ಕಸ್ತೂರ್‌ಬಾ-ಮೋಹನ್‌ದಾಸ್ ಗಾಂಧಿ ವಂಶವೃಕ್ಷದಲ್ಲಿ ಸಾಧಾರಣವಾಗಿ ೧೩ ಮೊಮ್ಮಕ್ಕಳನ್ನು ಮತ್ತು ೨೯ ಮರಿಮಕ್ಕಳನ್ನು ಗುರುತಿಸುತ್ತಾರೆ; ಮರಿಮಕ್ಕಳು ಮತ್ತು ಮರಿಮೊಮ್ಮಕ್ಕಳು ಇಂದು ಜಗದಾದ್ಯಂತ ಚದುರಿದ್ದಾರೆ. ಹೃದ್ರೋಗ, ನೇತ್ರರೋಗ, ಮಧುಮೇಹ ತಜ್ಞರು, ವ್ಯಾಯಾಮ-ಚಿಕಿತ್ಸಕರು, ಕಂಪ್ಯೂಟರ್ ತಂತ್ರಜ್ಞರು, ಹಣಕಾಸು ವಿಶೇಷಜ್ಞರು, ಛಾಯಾಗ್ರಾಹಕರು, ಪತ್ರಕರ್ತರು, ಪ್ರೊಫೆಸರರು, ಗಾಂಧೀ ಸಂಸ್ಥೆಗಳ ನಿರ್ವಾಹಕರು ಇತ್ಯಾದಿ ವಿಧವಿಧ ವೃತ್ತಿಗಳಲ್ಲಿ, ಭಾರತ ದಲ್ಲಿಯೇ ಅಲ್ಲದೆ, ಯು. ಎಸ್. ಎ., ಕೆನಡ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿಯೂ ಗಾಂಧಿ ಪೀಳಿಗೆಯ ಸದಸ್ಯರು ಇಂದು ಸೇವೆ ಸಲ್ಲಿಸುತ್ತಿದ್ದಾರೆ.

ಕಡೆಯದಾಗಿ, ಗಾಂಧಿ-ನೆಹ್ರೂ ಸಂಬಂಧ ದಿಂದಾಗಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಒಂದು ಹೊಸ ಗಾಂಧೀಶಕೆ ಪ್ರಾರಂಭವಾದುದರ ಬಗ್ಗೆ ಯೋಚಿಸುವುದು ಸ್ವಾರಸ್ಯಕರವೆನಿಸ ಬಹುದು. ಘಾಂಧಿ ಅಥವಾ ಘಾಂಡಿ ಎಂದು ಪಾರ್ಸಿ ಗಳಲ್ಲಿ ಸಾಮಾನ್ಯವಾಗಿರುವ ಕುಲನಾಮವನ್ನೇ ಇಂದಿರಾ ಗಾಂಧಿ ಅವರ ಪತಿಯು ಮೊದಲಲ್ಲಿ ಹೊಂದಿದ್ದು, ವಿವಾಹದ ಸಮಯಕ್ಕೆ ಗಾಂಧೀ ಅವರ ಸಲಹೆಯ ಮೇರೆಗೆ ತಮ್ಮ ಹೆಸರನ್ನು ಫಿರೋಜ್ ಜಹಾಂಗೀರ್ ಗಾಂಧಿ ಎಂದು ಬದಲಾಯಿಸಿ ಕೊಂಡರೆನ್ನುತ್ತಾರೆ. ಇದಕ್ಕೆ ಮುಂಚೆ, ಟ್ಯಾಗೋರ್‌ರ ಅಕ್ಕನ ಮಗಳು ಸರಳಾದೇವಿ ಅವರ ಮಗ ದೀಪಕ್ ಚೌಧರಿ ಅವರೊಡನೆ ಇಂದಿರಾಗಾಂಧಿ ಅವರ ವಿವಾಹವನ್ನು ಗಾಂಧಿ ಅವರು ನೆಹ್ರೂರಲ್ಲಿ ಪ್ರಸ್ತಾಪಿಸಿದ್ದರಂತೆ. ಇದೇನಾದರೂ ನೆರವೇರಿ, ಇಂದಿರಾ ಪ್ರಿಯದರ್ಶಿನಿ ಅವರಿಗೆ ಗಾಂಧಿ ನಾಮದ ಬಲವೇ ದೊರಕದೆ ಹೋಗಿದ್ದರೆ, ಸ್ವತಂತ್ರ ಭಾರತದ ಇತಿಹಾಸವೇ ಬದಲಾಗುತ್ತಿತ್ತೇನೋ! ■

## OBITUARY



1947 – September 20, 2012

**Dinesh Thakur** was a noted Indian Theatre director, actor in theatre, television and Hindi Film, most notably appeared as one of the leads in Rajnigandha 1974 directed by Basu Chatterjee, which won both Filmfare Best Movie Award and the Filmfare Critics Award for Best Movie. He was the founder-director of ANK productions, a Mumbai-based theatre company, established in 1976.

Though he mainly appeared in character roles in Hindi films, was also a screenwriter and story writer, he is known for writing the story and screenplay of Ghar (1978), which won him the 1979 Filmfare Best Story Award.

He was actively associated with Mysore Association. Hindi Theatre activities was started by Dinesh Thakur in the early stages of our Auditorium's inauguration.

He died on September 20, 2012 due to kidney failure.

The President and the members of Mysore Association deeply mourn the passing away of Dinesh Thakur. May his soul rest in peace.

# ಜಾಗತೀಕರಣದ ಹಿನ್ನೆಲೆಯಲ್ಲಿ ಗಾಂಧಿಯ ಪ್ರಸ್ತುತತೆ

✍ ಡಾ ಸಿ. ನಾಗಣ್ಣ

ಉದಾರೀಕರಣ ಮತ್ತು ಜಾಗತೀಕರಣದಿಂದ ನಮಗೆ ಏನೆಲ್ಲಾ ಲಾಭಗಳಾಗುತ್ತಿವೆಯೆಂದು ನಮ್ಮ ಸುತ್ತ ಅನೇಕ ಧ್ವನಿಗಳು ಒಂದೇ ಸಮನೆ ಬೊಬ್ಬಿರಿಯುತ್ತಿರುವಾಗ ಗಾಂಧಿಯವರ ಬಗ್ಗೆ ಹಾಗೂ ಅರ್ಧ ಶತಮಾನದ ಹಿಂದೆಅವರು ಮಾತನಾಡಿದುದರ ಬಗ್ಗೆ ಹೇಳುವುದು ಅಸಂಗತವಾಗಿ ತೋರಬಹುದು. ಆದಾಗ್ಯೂ ಹಿಂಸೆ, ಅಪರಾಧ, ಭ್ರಷ್ಟಾಚಾರ, ದುರಾಸೆ, ಮೈಗಳ್ಳತನ ಹಾಗೂ ಕಾನೂನು ಮತ್ತು ಶಿಸ್ತನ್ನು ಇತ್ತೀಚೆಗೆ ಭಾರತೀಯ ಸಮಾಜ ಗಾಳಿಗೆ ತೂರಿರುವ ಹಿನ್ನೆಲೆಯಲ್ಲಿ ಗಾಂಧಿ ಬಗ್ಗೆ ಮಾತನಾಡುವುದು ಅಷ್ಟು ಅಸಂಗತವಾಗಿ ಕಾಣಲಾರದು. ಭಾರತೀಯ ಸಮುದಾಯದ ಚಾರಿತ್ರ್ಯವಿಹೀನ ಸ್ಥಿತಿ ಮತ್ತು ಭವಿಷ್ಯದ ಬಗ್ಗೆ ಹೆಚ್ಚುತ್ತಿರುವ ಆತಂಕ ನಾವು ಸ್ಪಷ್ಟವಾಗಿ ಕಾಣುತ್ತಿರುವ ಸಂಗತಿಗಳಾಗಿವೆ. ಭಾರತದ ಸ್ವಾತಂತ್ರ್ಯ ಸಮರದ ಸುದೀರ್ಘ ಪರ್ವದಲ್ಲಿ ಕಂಡು ಬಂದಿದ್ದ ಧೈರ್ಯ, ಅಹಿಂಸೆ, ಸಾಮಾಜಿಕ ಜವಾಬ್ದಾರಿ ಹಾಗೂ ದೃಢತೆಯನ್ನು ನಾವು ಮರಳಿ ಪಡೆಯಬೇಕಿದೆ. ಹಾಗಾಗಿ ಆ ಚಳುವಳಿಯ ಆದ್ಯಪ್ರವರ್ತಕರಾಗಿ ಗಾಂಧಿ ಮಾಡಿದ ಹೋರಾಟ ಇಂದಿಗೂ ಕೂಡ ಪ್ರಸ್ತುತವಾಗಿದೆ.

ಆದರೆ ಅಷ್ಟೇ ಅಲ್ಲ! ಎಲ್ಲರಿಗೂ ತಿಳಿದಿರುವಂತೆ, ಗಾಂಧಿ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸುವುದಕ್ಕಿಂತ ಹೆಚ್ಚಿನದನ್ನು ಸಾಧಿಸುವ ಗುರಿ ಹೊಂದಿದ್ದರು. ನೈತಿಕವಾಗಿ, ಆರ್ಥಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಜನರು ಸರ್ವತೋಮುಖ ಏಳಿಗೆ ಸಾಧಿಸಬೇಕೆಂಬುದು ಅವರ ಹೋರಾಟದ ಮೂಲ ಮಂತ್ರವಾಗಿತ್ತು. ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಗುರಿಯಲ್ಲಿಟ್ಟುಕೊಂಡಿದ್ದ ಅವರ 'ಸರ್ವೋದಯ' ಪರಿಕಲ್ಪನೆ ಅನನ್ಯವಾದದ್ದು. ಆ ರೀತಿಯಾಗಿ ಸಮಸ್ಯೆಗಳನ್ನು ಪರಿಹರಿಸಲು ಅವರು ಪ್ರಾರಂಭಿಸಿದ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಭಾರತ ಸರ್ಕಾರದ 'ಹೊಸ ಆರ್ಥಿಕ ನೀತಿ' ಸಮರ್ಥವಾಗಿ ಸಮಸ್ಯೆಗಳನ್ನು ನಿಭಾಯಿಸು ವುದೋ ಎಂಬುದು ಅನುಮಾನಾಸ್ಪದ ವಾಗಿಯೇ ಉಳಿದಿದೆ. ಉದಾರೀಕರಣ ಹಾಗೂ ಜಾಗತೀಕರಣದ ನೇತ್ಯಾತ್ಮಕ ಪ್ರಭಾವ ಈಗಾಗಲೇ ಜನಸಾಮಾನ್ಯನ ಮೇಲೆ ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇವುಗಳ ಪ್ರಭಾವವನ್ನು ಅಳವಡಿಸಿಕೊಳ್ಳಲು ಇದು ಸಕಾಲವೆಂದು ತಿಳಿಯಬೇಕಾಗಿದೆ.

ಅದಾಗ್ಯೂ ಗಾಂಧಿ ಮತ್ತು ಜಾಗತೀಕರಣ ಬಹಳ ವ್ಯಾಪಕವಾದ ವಿಷಯಗಳಾದ್ದರಿಂದ ಒಂದೆರಡು ವಲಯಗಳಿಗೆ ಸೀಮಿತಗೊಳಿಸಿಕೊಂಡು ಮುಂದುವರಿಯುವುದು ಸೂಕ್ತ. ಉದಾಹರಣೆಗೆ ಅ) ತಂತ್ರಜ್ಞಾನ ಮತ್ತು ಉದ್ಯೋಗ ಆ) ಅಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮತ್ತು ಇ) ಸಮಾಜ ಮತ್ತು ಸಂಸ್ಕೃತಿ. ಈ ವಿಷಯಗಳ ಮೇಲೆ ಸಂಕ್ಷಿಪ್ತವಾಗಿ ಚರ್ಚೆ ಮಾಡಿ ಈವತ್ತು ರಾಷ್ಟ್ರವು ಎದುರಿಸುತ್ತಿರುವ ಮುಖ್ಯ ಸಂಗತಿಗಳತ್ತ ಗಮನ ಸೆಳೆಯುವುದು ಸೂಕ್ತವೆನಿಸುತ್ತದೆ.

### ತಂತ್ರಜ್ಞಾನ ಮತ್ತು ಉದ್ಯೋಗ

ಭಾರತದ ಸ್ವಾತಂತ್ರ್ಯದ ಶಿಲ್ಪಿ ಮಹಾತ್ಮಾಗಾಂಧಿ ಎಂದಾದರೆ, ಜವಹರ್‌ಲಾಲ್ ನೆಹರೂ ಅವರು ಸ್ವತಂತ್ರ ಭಾರತದ ಆರ್ಥಿಕ ಕಾರ್ಯಕ್ರಮಗಳ ರೂವಾರಿ ಎನ್ನಬಹುದು. ರಾಜಕೀಯ ಸ್ವಾತಂತ್ರ್ಯ ಗಳಿಸಿದ ಕೂಡಲೇ ಜನಸ್ತೋಮದ ಬಡತನವನ್ನು ನಿರ್ಮೂಲನೆ ಮಾಡಲು ಗಾಂಧಿ ಮತ್ತು ನೆಹರು ಬದ್ಧರಾಗಿದ್ದರು; ಕೆಲವು ಮಂದಿ ಶ್ರೀಮಂತರ ತಿಕ್ಕಲುತನವನ್ನು ಪೋಷಿಸುವುದಕ್ಕೆ ಬದಲಾಗಿ ಸ್ವಲ್ಪ ಸಮಯದವರೆಗಾದರೂ ರಾಷ್ಟ್ರದ ಸಂಪನ್ಮೂಲಗಳನ್ನು ಜನರ ಮೂಲಭೂತ ಅಗತ್ಯಗಳಾದ ಆಹಾರ, ವಸ್ತ್ರ, ಆಶ್ರಯ, ಶಿಕ್ಷಣ, ಆರೋಗ್ಯ ಹಾಗೂ ನೈರ್ಮಲ್ಯಕ್ಕಾಗಿ ವಿನಿಯೋಗಿಸಬೇಕೆಂದು ಅವರು ಲೆಕ್ಕ ಹಾಕಿದ್ದರು. ಅದಾಗ್ಯೂ ಈ ಮೂಲಭೂತ ಅಗತ್ಯಗಳು ಎನ್ನುವುದರ ಬಗ್ಗೆ ಹಾಗೂ ಅನುಸರಿಸಬೇಕಾದ ಮಾರ್ಗದ ಬಗ್ಗೆ ಅವರಲ್ಲಿ ಬಹಳ ಭಿನ್ನಾಭಿಪ್ರಾಯಗಳಿದ್ದವು.

ಪಡುವಣದ ಬಂಡವಾಳಶಾಹಿ ಅರ್ಥವ್ಯವಸ್ಥೆ ಹಾಗೂ ಸೋವಿಯತ್ ರಷ್ಯಾದ ಸಮಾಜವಾದಿ ಅರ್ಥವ್ಯವಸ್ಥೆ ಸಾಧಿಸಿದ ಕೈಗಾರಿಕೀಕರಣ ಹಾಗೂ ತಂತ್ರಜ್ಞಾನದ ಪ್ರಗತಿಯಿಂದ ಉತ್ತೇಜಿತರಾಗಿ ಪ್ರಗತಿಯ ಕೈಗಾರಿಕೀಕರಣವೇ ನಮ್ಮ ಬಡತನವನ್ನು ಹೋಗಲಾಡಿಸಲು ಸಿದ್ಧೌಷಧವೆಂದು ನೆಹರು ತೀರ್ಮಾನಕ್ಕೆ ಬರಲು ಮುಖ್ಯ ಕಾರಣ ಅವರ ಪ್ರಕಾರ ಹೆಚ್ಚಿನ ಕೈಗಾರಿಕೆ ಎಂದರೆ ಹೆಚ್ಚಿನ ಉದ್ಯೋಗವೆಂದೂ, ತತ್ಫಲವಾಗಿ ಕೃಷಿ ಹಾಗೂ ಇನ್ನಿತರೆ ಪ್ರಾಥಮಿಕ ಚಟುವಟಿಕೆಗಳು ವೃದ್ಧಿಯಾಗುವುದೆಂದೂ — ಒಟ್ಟಾರೆಯಾಗಿ ಕೈಗಾರಿಕೀಕರಣದಿಂದ ಉದ್ಯೋಗ ಹಾಗೂ ಉತ್ಪಾದನೆ ಹೆಚ್ಚುವುದೆಂದೂ ಆಯಿತು. ಆದರೆ ಭಾರತದಂತಹ ಬೃಹತ್ ರಾಷ್ಟ್ರದ ಬಡತನವನ್ನು ನಿವಾರಿಸಲು ಕೈಗಾರಿಕೆಯೊಂದರಿಂದಲೇ ಸಾಧ್ಯವಾಗದೆಂದು ನೆಹರೂರವರಿಗೆ ಮನದಟ್ಟಾಗಲು ಬಹಳ ಕಾಲ ಬೇಕಾಗಲಿಲ್ಲ. ಹಾಗಾಗಿ 1963 ರಲ್ಲಿ ಲೋಕ ಸಭಾ ಚರ್ಚೆಯ ಸಂದರ್ಭದಲ್ಲಿ ನೆಹರೂ ಆಡಿದ ಮಾತುಗಳು ಹೆಚ್ಚು ಅರ್ಥಪೂರ್ಣ ವಾಗಿದೆ. ''ನನಗೆ ಅತ್ಯಂತ ನೋವುಂಟು ಮಾಡಿರುವ ಸಂಗತಿಯೆಂದರೆ ಯೋಜನೆಯಿಂದ ನಮ್ಮ ಬಹುತೇಕ ಜನರಿಗೆ ಏನೇನೂ ಲಾಭವಾಗಲಿಲ್ಲ. ಮಹಾತ್ಮಾ ಗಾಂಧಿಯವರ ವಿಧಾನದ ಬಗ್ಗೆ ನಾನೀಗ ಹೆಚ್ಚು ಹೆಚ್ಚು ಯೋಚಿಸತೊಡಗಿದ್ದೇನೆ... ನಾನು ಆಧುನಿಕ ಯಂತ್ರವನ್ನು ಮೋಹಿಸುವವ ಎಂಬುದರಲ್ಲಿ ಅನುಮಾನವಿಲ್ಲ. ನನಗೆ ಅತ್ಯುತ್ತಮ ಯಂತ್ರಬೇಕು, ಅತ್ಯುತ್ತಮ ತಂತ್ರಗಳು ಬೇಕು. ಆದರೆ ಭಾರತದ ವಿದ್ಯಮಾನಗಳನ್ನು ಗಮನಿಸುವುದಾದರೆ, ನಾವೆಷ್ಟೇ ಕ್ಷಿಪ್ರವಾಗಿ ಯಂತ್ರಯುಗದ ಕಡೆ ದಾಪುಗಾಲು ಹಾಕಿದರೂ, ನಮ್ಮ ಬಹುಸಂಖ್ಯಾತ ಜನರಿಗೆ ಅದರ ಫಲ ದಕ್ಕಲೊಲ್ಲದು. ಗಣನೀಯ ಅವಧಿಯವರೆಗೆ ಅವರು ಅದರ ಲಾಭ ಪಡೆಯದವರಾಗುತ್ತಾರೆ. ಬೇರೊಂದು ವಿಧಾನದ ಆವಿಷ್ಕಾರವಾಗಬೇಕಾದುದು ಅಗತ್ಯವೆನಿಸುತ್ತದೆ''.

ಈ ಮಾತುಗಳನ್ನಾಡಿ ಮೂರು ದಶಕಗಳಿಗೂ ಹೆಚ್ಚು ಕಾಲ ಸಂದಿದೆ. ಭಾರತ ಸರ್ಕಾರ ಅನುಸರಿಸುತ್ತಿರುವ ಕೈಗಾರಿಕಾ ನೀತಿಯ ಹಿನ್ನೆಲೆಯಲ್ಲಿ ಹೇಳುವುದಾದರೆ ರಾಷ್ಟ್ರದ ಉದ್ಯೋಗದ ಅಗತ್ಯಗಳನ್ನು ಪೂರೈಸಲು ಸಾಧ್ಯವಿಲ್ಲದಂತಾಗಿದೆ. ಇದರ ಜೊತೆಗೆ ಜಾಗತಿಕ ಬಂಡವಾಳ ಶಾಹಿಯ ದುರಂತವನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಪಶ್ಚಿಮದ ವ್ಯಾಪಾರೀ ವರ್ಗದವರೊಡನೆ ಪಾಲುದಾರರಾಗಿರುವ ನಮ್ಮಲ್ಲಿನ ಶ್ರೀಮಂತ ವರ್ಗದವರ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಉತ್ಪಾದನಾ ಗುರಿಗಳು ಮತ್ತು

**ಮಾನವ ಕ್ಷೇಮಾಭಿವೃದ್ಧಿ ಎನ್ನುವುದು ಸಾಂಸ್ಕೃತಿಕ ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಆಯಾಮಗಳನ್ನು ಒಳಗೊಂಡಿದ್ದು ಒಂದು ಸ್ತ್ರೀಪುರುಷ ಸಮುದಾಯವನ್ನು ಜೀವಂತ ಸಮಾಜವನ್ನಾಗಿ ಪರಿವರ್ತಿಸಲು ಅತ್ಯವಶ್ಯಕವಾಗಿದೆ. ಆರ್ಥಿಕವಾಗಿ ಬಡತನವನ್ನನುಭವಿಸುವ ಸಮಾಜವೂ ಕೂಡ ಆರ್ಥಿಕೇತರವಾದ ಇಂಥ ವಲಯಗಳಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವೆನ್ನುವುದು ಸಾಬೀತಾಗಿದೆ.**

ನೀತಿಗಳನ್ನು ಮಾರ್ಪಾಡು ಮಾಡಲಾಗುತ್ತಿದೆ. ತಂತ್ರಜ್ಞಾನದ, ಆಧುನಿಕತೆಯ ಹೆಸರಿನಲ್ಲಿ ಮಾರುಕಟ್ಟೆ ಅರ್ಥವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಪ್ರಸ್ತುತ ಸನ್ನಿವೇಶದಲ್ಲಿ ತಲೆದೋರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಸರ್ಕಾರಗಳೇ ಸಮಾಜಿಕ ಕಲ್ಯಾಣದ ಅನುಕೂಲತೆಗಳಿಗಾಗಿ ಮುಂಗಡದಲ್ಲೇ ವ್ಯವಸ್ಥೆ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಮುಂದುವರಿದ ರಾಷ್ಟ್ರಗಳು ತಮ್ಮ ಹೆಚ್ಚಿನ ತಲಾದಾಯ ಹಾಗೂ ಕಡಿಮೆ ಜನಸಂಖ್ಯೆಯ ಕಾರಣ ನಿರುದ್ಯೋಗ ಸಮಸ್ಯೆಯನ್ನು ನಿಭಾಯಿಸಿಕೊಂಡಿವೆ. ಅದಾಗ್ಯೂ ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಗಳು ಕೂಡ ಹಣಕಾಸು ಯೋಜನೆಗಳ ಮೂಲಕ ನಿರುದ್ಯೋಗ ಹಾಗೂ ಸಮಾಜಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದೆಂದೂ ಇದಕ್ಕೆ ಜಾಗತೀಕರಣ ಮತ್ತು ಉದಾರೀಕರಣ ಅಡ್ಡಿಯಾಗದೆಂದು ಅರ್ಥಶಾಸ್ತ್ರಜ್ಞರು ನಂಬುತ್ತಾರೆ.

## ಅಭಿವೃದ್ಧಿ ಹಾಗೂ ಪ್ರಜಾಕ್ಷೇಮ

ವಾಸ್ತವವಾಗಿ ಅಭಿವೃದ್ಧಿಯೆಂದರೇನು ಎಂಬ ಪ್ರಶ್ನೆಗೆ ಗಾಂಧೀಜಿ ಉತ್ತರಿಸಿದ ರೀತಿ ನಮ್ಮ ಮಾಮೂಲು ಪರಿಕಲ್ಪನೆಗಿಂತ ಭಿನ್ನವಾಗಿರುವುದು ಗಮನಕ್ಕೆ ಬರುತ್ತದೆ. ಅವರ ಪ್ರಕಾರ ಅಭಿವೃದ್ಧಿ ಎನ್ನುವುದು ಮನುಷ್ಯನ ಸರ್ವತೋಮುಖ ಉತ್ತಮಿಕೆಯನ್ನು ತೆಕ್ಕೆಗೆ ತೆಗೆದುಕೊಳ್ಳುವಂತಹದ್ದಾಗಿದೆ. ಒಟ್ಟು ಸಮಾಜದ ಎಲ್ಲ ಪ್ರಜೆಗಳ ಶಾರೀರಿಕ ಹಾಗೂ ನೈತಿಕ ಸಾಮರ್ಥ್ಯದ ಹೆಚ್ಚಳವನ್ನು ಈ ತತ್ವ ಪ್ರತಿಪಾದಿಸುತ್ತದೆ. ಸಮಾಜ ಜನರ ಐಹಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದರ ಜೊತೆಗೆ ಅವರ ಕ್ಷೇಮದ ಬಗ್ಗೆ ವಿಸ್ತಾರವಾಗಿ ಚಿಂತಿಸುವಾಗ ಸಮಾಜದ ಸಾಂಸ್ಕೃತಿಕ ಹಾಗೂ ನೈತಿಕ ಮೌಲ್ಯಗಳು ದೃಷ್ಟಿಗೆ ಬರುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ ಮಾರುಕಟ್ಟೆ ನಿರ್ದೇಶಿತ ಜಾಗತೀಕರಣ ಮತ್ತು ಜಾಗತಿಕ ಬಂಡವಾಳಶಾಹಿಯ ದೃಷ್ಟಿ ಸೀಮಿತವಾಗಿದ್ದು ಅಭಿವೃದ್ಧಿ ಎಂಬುದಕ್ಕೆ ಹೆಚ್ಚು ವ್ಯಾಪಾರೀಯ ಗುಣಗಳನ್ನು ಲೇಪನ ಮಾಡುತ್ತದೆ. ಗ್ರಾಹಕರ ಆಯ್ಕೆಯಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸುವುದು ಇದರ ಮುಖ್ಯ ಧ್ಯೇಯವಾಗಿ ಕಾಣುತ್ತದೆ. ಸಂಪನ್ಮೂಲವನ್ನು ತೊಡಗಿಸುವುದರಲ್ಲಿ ಹೆಚ್ಚು ದಕ್ಷತೆಯನ್ನು ಸಾಧಿಸಬೇಕೆಂದು ಜಾಗತೀಕರಣ ಹಠ ಹಿಡಿಯುತ್ತದೆ. ಇದರ ಪ್ರಕಾರ ದಕ್ಷತೆ ಎಂದರೆ ಖಾಸಗೀ ಉತ್ಪಾದನೆ ಮತ್ತು ಲಾಭ ಗಳಿಸುವಿಕೆಯೇ ಆಗಿದೆ.

ಉತ್ಪಾದನೆಯ ಜಾಗತೀಕರಣ ಹಾಗೂ ವ್ಯಾಪಾರದಿಂದ ತಿಳಿದುಬರುವ ಒಂದು ಅಂಶವೆಂದರೆ ಆರ್ಥಿಕವಾಗಿ ಸದೃಢವಾದ ಹಾಗೂ ತಾಂತ್ರಿಕವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ನಿರೀಕ್ಷಿತ ಲಾಭವನ್ನು ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ದಕ್ಕದಂತೆ ಮಾಡುತ್ತಿರುವುದು. ಜಾಗತಿಕ ಲಾಭವನ್ನು ಹಣಕಾಸು ಯೋಜನೆಗಳ ಮೂಲಕ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವಿತರಿಸುವಂಥ ಯಾವುದೇ ಬಗೆಯ ಸರ್ವಶಕ್ತ ಜಾಗತಿಕ ಸರ್ಕಾರವನ್ನು ನಾವು ಕಲ್ಪಿಸಿಕೊಳ್ಳಲಾರೆವು. ಅಂತರರಾಷ್ಟ್ರೀಯ ಸಂಸ್ಥೆಗಳಾದ ಐ. ಎಮ್.ಎಫ್. ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಘಟನೆ, ಹಾಗೂ ವಿಶ್ವ ಸಂಸ್ಥೆ ಇವುಗಳಲ್ಲಿ ಮುಂದುವರೆದ ರಾಷ್ಟ್ರಗಳದ್ದೇ ದರ್ಬಾರಾಗಿರುವಾಗ ಪರಿಸ್ಥಿತಿಯನ್ನು ಬದಲಿಸಲು ಇವುಗಳಿಗೆ ಆಸಕ್ತಿ ಇರುವುದಾಗಿ ಊಹಿಸಿಕೊಂಡು ಹೇಳುವಾಗಲೂ ಬದಲಾಯಿಸಲು ಇವು ಅಸಮರ್ಥವಾಗಿವೆ.

ಅಭಿವೃದ್ಧಿ ಸಂಬಂಧ ಉದಾರೀಕರಣ – ಜಾಗತೀಕರಣದ ಮಾರ್ಗ ಸಲ್ಲದೆಂದು ವಿರೋಧಿಸುವವರ ಕಾಳಜಿಗಳು ಎರಡು ಬಗೆಯದ್ದಾಗಿರುತ್ತವೆ; ಒಂದು ಜನರನ್ನು ಮಧ್ಯರಂಗಕ್ಕೆ ತಂದು ಜೀವನ ಮಟ್ಟವನ್ನು ಉತ್ತಮಪಡಿಸುವುದರ ಕಡೆ ಗಮನ ಹರಿಸುವುದು' ಎರಡನೆಯದು, ಈ ಸುಧಾರಣೆಗಳನ್ನು ಸ್ವಲ್ಪ ಕಾಲದವರೆಗೆ ಮುಂದುವರೆಸುತ್ತಾ ಮುಂದಿನ ಜನಾಂಗಗಳು ಇದರ ಹೊರೆಯನ್ನು ಹೊರುವಂಥ ಪರಿಸ್ಥಿತಿಯನ್ನು ನಿವಾರಿಸಲು ನಿಗಾವಹಿಸುವುದು. ಪರಿಸರ ಸಂರಕ್ಷಣೆಯನ್ನು ಕುರಿತಾದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕಾರ್ಯಕ್ರಮಗಳು ಈ ಎರಡನೆಯ ವರ್ಗಕ್ಕೆ ಸೇರಿದವಾಗಿದೆ. ಗ್ರಾಮಕೇಂದ್ರಿತ ಅಭಿವೃದ್ಧಿ ಪರಿಕಲ್ಪನೆಯನ್ನು ಮುಂದಿಡುವಾಗ ಗಾಂಧೀಜಿಯವರು ಈ ದೃಷ್ಟಿಕೋನವನ್ನು ಹೊಂದಿದ್ದರು. ಆದರೆ ಕಳೆದ ಅರ್ಧಶತಮಾನದ ಅವಧಿಯಲ್ಲಿ ಜನರ ರೀತಿ ರಿವಾಜುಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಗಾಂಧೀಜಿಯವರು ನಿರ್ದೇಶಿಸಿದ ವಿಧಾನ ಹೆಚ್ಚು ಸಮಗ್ರವಾಗಿದ್ದು ಸತ್ಯ, ಅಹಿಂಸೆ ಹಾಗೂ ಬ್ರಹ್ಮಚರ್ಯೆ ಯನ್ನು ಅವರು ದೃಷ್ಟಿಯಲ್ಲಿಟ್ಟುಕೊಂಡಿದ್ದರು. ವ್ಯಾಪಕವಾಗಿ ಸಮಾಜಸದರು ಈ ತತ್ವವನ್ನು ಅನುಷ್ಠಾನಕ್ಕೆ ತರುತ್ತಾರೆಂಬ ಗ್ಯಾರಂಟಿ ಇಲ್ಲ. ಸಾಮಾಜಿಕ ಹಾಗೂ ಖಾಸಗೀ ಹಿತವನ್ನು ಹೊಂದಿಸುವಂತ ಒಂದು ಸಾಂಸ್ಕೃತಿಕವಾದ ಅಂಗವೂ ಕೂಡ ಇದರಲ್ಲಿ ಅಡಕವಾಗಿದೆ. ಸಾಂಸ್ಕೃತಿಕವಾದ ಬದಲಾವಣೆಯನ್ನು ನಿರ್ದೇಶಿಸುವ ಗಾಂಧೀಜಿಯವರ ತತ್ವಗಳಲ್ಲಿ ಇದೂ ಮುಖ್ಯವಾದ ಅಂಗವೇ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಆಹಾರ, ಆಶ್ರಯ ಶಿಕ್ಷಣ, ವಸ್ತ್ರ ಇತ್ಯಾದಿ ಮೂಲಭೂತ ಅಗತ್ಯತೆಗಳನ್ನು ಪೂರೈಸದೆ ಉಳಿದ ವಿಷಯಗಳ ಕಡೆ ಗಮನ ಕೊಡುವುದು ಸುಲಭದ ಮಾತಾಗಿ ಕಾಣುವುದಿಲ್ಲ.

## ಸಮಾಜ ಮತ್ತು ಸಂಸ್ಕೃತಿ

ಮಾನವ ಕ್ಷೇಮಾಭಿವೃದ್ಧಿ ಎನ್ನುವುದು ಸಾಂಸ್ಕೃತಿಕ ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಆಯಾಮಗಳನ್ನು ಒಳಗೊಂಡಿದ್ದು ಒಂದು ಸ್ತ್ರೀಪುರುಷ ಸಮುದಾಯವನ್ನು ಜೀವಂತ ಸಮಾಜವನ್ನಾಗಿ ಪರಿವರ್ತಿಸಲು ಅತ್ಯವಶ್ಯಕವಾಗಿದೆ. ಆರ್ಥಿಕವಾಗಿ ಬಡತನವನ್ನನುಭವಿಸುವ ಸಮಾಜವೂ ಕೂಡ ಆರ್ಥಿಕೇತರವಾದ ಇಂಥ ವಲಯಗಳಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವೆನ್ನುವುದು ಸಾಬೀತಾಗಿದೆ. ತಮ್ಮ ವೈಯಕ್ತಿಕ ಬದುಕಿಗೆ ಎಷ್ಟೇ ತೊಂದರೆಯಾದರೂ ಶ್ರೇಷ್ಠತೆಯನ್ನು ಸಾಧಿಸಲು ದುಡಿಯುವಂತಹ ಸ್ತ್ರೀ–ಪುರುಷರು ಸಿಕ್ಕೇ ಸಿಗುತ್ತಾರೆ. ಹಾಗಾಗಿ ತಮ್ಮ ಸಂಪರ್ಕಕ್ಕೆ ಬಂದವರನ್ನು ಸಹ ಅವರು ಅತ್ಯವಶ್ಯಕವಾಗಿ ಪ್ರಭಾವಗೊಳಿಸುತ್ತಾರೆ. ಹಾಗೆಯೇ ಸಾಪೇಕ್ಷವಾಗಿ ಶ್ರೀಮಂತರಾದ ಅನೇಕ ಮಂದಿ ಸಮುದಾಯದ ಸಾಂಸ್ಕೃತಿಕ ಹಾಗೂ ನೈತಿಕವಾದ ವಿಚಾರದ ಬಗ್ಗೆ ಕಾಳಜಿಯುಳ್ಳವರಾಗಿದ್ದು ಎಲ್ಲರ ಪ್ರಗತಿಗಾಗಿ ದುಡಿಯುವುದು ಅಪರೂಪವೇನಲ್ಲ. ಸರ್ಕಾರ ಹಾಗೂ ಸರ್ಕಾರೇತರ ಏಜೆನ್ಸಿಗಳು ಹೆಚ್ಚುವರಿ ಶೈಕ್ಷಣಿಕ, ಆರೋಗ್ಯ ಹಾಗೂ ಸಾಮಾಜಿಕ ಭದ್ರತೆಯ ಸೌಕರ್ಯಗಳನ್ನು ನೀಡುವುದರ ಮೂಲಕ ಸಾಂಸ್ಕೃತಿಕ ಪ್ರಗತಿಯ ತಳಹದಿಯನ್ನು ಸದೃಢಗೊಳಿಸುತ್ತವೆ. ಆರ್ಥಿಕ ಬೆಳವಣಿಗೆಯನ್ನು ಅನ್ವೇಷಿಸುವ ಕಾಲಕ್ಕೆಯೇ ಸಾಂಸ್ಕೃತಿಕ ಅಭಿವೃದ್ಧಿಗಾಗಿ ಪ್ರತಿಯೊಂದು ಸಮಾಜವು ತನ್ನ ಚಟುವಟಿಕೆಯ ಕೆಲವು ಭಾಗವನ್ನು ವಿನಿಯೋಗಿಸಬೇಕಾಗಿದೆ.

ಜಾಗತೀಕರಣದ ಸೌಲಭ್ಯಗಳು ದ್ವಾರವನ್ನು ಮುಕ್ತವಾಗಿ ತೆರೆಯುವುದು ಒಂದು ಅಂಗವಾದರೆ ಸಮಾಜದ ನೈತಿಕ ಹಾಗೂ ಸೌಂದರ್ಯಾತ್ಮಕ ಗುಣಗಳಿಗೆ ಧಕ್ಕೆಯೊಡ್ಡುವ ಪರಕೀಯ ಸಂಸ್ಕೃತಿ ಹಾಗೂ ನಾಗರೀಕತೆಗಳನ್ನು ವಿವೇಚನಾರ ಹಿತವಾಗಿ ಸ್ವೀಕರಿಸುವ ಅಪಾಯದ ವಿರುದ್ಧ ಎಚ್ಚರಿಕೆ ವಹಿಸಬೇಕಾದುದು ಅತ್ಯಗತ್ಯವಾಗಿದೆ. ಈ ವಿಷಯವಾಗಿ ಗಾಂಧಿ ನೀತಿಯನ್ನನುಸರಿಸುವುದು ಉತ್ತಮ – "ಎಲ್ಲ ದಿಕ್ಕುಗಳಿಂದ ಹೊಸಗಾಳಿ ಬೀಸುತ್ತಿರಲಿ, ಆದರೆ ನೆಲದ ಮೇಲೆ ಕಾಲುಗಳು ಮಾತ್ರ ಭದ್ರವಾಗಿರಲಿ" ಸಾಂಸ್ಕೃತಿಕ ದಬ್ಬಾಳಿಕೆಯ ವಿರುದ್ಧ ಎಚ್ಚರಿಕೆ ವಹಿಸಬೇಕು ಇಲ್ಲವಾದರೆ ಕಲೆಯ ರೂಪಗಳು ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಹೊರಗಿನ ರೀತಿ – ರಿವಾಜುಗಳನ್ನು ಅಳವಡಿಸಿಕೊಂಡ ಮಾದರಿ ಎದ್ದು ದೇಶೀಯ ಸೃಜನಶೀಲತೆಯನ್ನು ತಗ್ಗಿಸಿ ಕೀಳರಿಮೆಯನ್ನು ಹುಟ್ಟುಹಾಕುವಲ್ಲಿ ಪರ್ಯವಸಾನವಾಗುವುದು.

ಗ್ರಾಮಾಂತರ ಹಾಗೂ ಪಟ್ಟಣವಾಸಿಗಳ ನಡುವೆ

ಶಿಕ್ಷಣ ಹಾಗೂ ಆರೋಗ್ಯದ ಮಟ್ಟದಲ್ಲಿ ವ್ಯತ್ಯಾಸ ಕಾಣುವುದರ ಜೊತೆಗೆ ಜೀವನ ಶೈಲಿ ಮತ್ತು ಸಾಂಸ್ಕೃತಿಕ ವಿನ್ಯಾಸಗಳಲ್ಲಿ ಕೂಡಾ ತಾರತಮ್ಯ ಗೋಚರವಾಗುತ್ತಿದೆ. ಹೊರಗಿನ ಸಂಸ್ಕೃತಿಯಲ್ಲಿ ಬೇಡವಾದದ್ದು ಯಾವುದು, ಜಳ್ಳು ಯಾವುದು ಎಂಬುದನ್ನು ವಿವೇಚಿಸಿ, ಉತ್ತಮವಾದುದನ್ನು ಸ್ವೀಕರಿಸಿ ಅಂತಸ್ಥ ಮಾಡಿಕೊಳ್ಳಬೇಕಾದ ಸಾಮರ್ಥ್ಯವನ್ನು ಭಾರತದ ವೈವಿಧ್ಯಮಯ ಜನಸಮುದಾಯ ಪ್ರದರ್ಶಿಸಬೇಕಾಗಿದೆ. ಆದರೆ ಸದ್ಯದ ವಿದ್ಯಮಾನಗಳನ್ನು ಗಮಿನಿಸುವಾಗ ಹೆಚ್ಚಿನ ಪ್ರಮಾಣದ ಜನವರ್ಗ ಅಮೇರಿಕ ಅಥವಾ ಯೂರೋಪಿನ ಶ್ರೀಮಂತ ಸಮಾಜಗಳು ಒಪ್ಪಿರುವ ಶೈಲಿ ಅಭಿರುಚಿ ಹಾಗೂ ಧೋರಣೆಯನ್ನು ತನ್ನ ದಾಗಿಸಿಕೊಂಡಿರುವ ಪುರಾವೆ ಕಂಡುಬರುತ್ತದೆ. ಸ್ತ್ರೀಯರು ಹಾಗೂ ಪುರುಷರು ರಾಜಕೀಯ ಶಕ್ತಿ ಶ್ರೀಮಂತಿಕೆ ಹಾಗೂ ಎಲ್ಲ ಬಗೆಯ ಸಾಹುಕಾರತನವನ್ನು ಹೇಗಾದರು ಗಳಿಸುವುದು ಜೀವನದ ಪರಮ ಧ್ಯೇಯವೆಂದು ಪರಿಗಣಿಸಿರುವ ಹಾಗಿದೆ. ಈ ಗುರಿಯನ್ನು ಸಾಧಿಸುವ ಹಾದಿಯಲ್ಲಿ ನೈತಿಕ ಹಾಗೂ ಸಾಮಾಜಿಕ ಸನ್ನಡತೆಯನ್ನು ಗಾಳಿಗೆ ತೂರುವ ಪ್ರವೃತಿ ಕಾಣಿಸಿಕೊಂಡಿದೆ.

ಕೇವಲ ಜಾಗತೀಕರಣದ ಹಿನ್ನೆಲೆಯಲ್ಲಷ್ಟೇ ಈ ಪ್ರವೃತ್ತಿಗಳು ಕಾಣಿಸಿಕೊಂಡಿರುವುದಾಗಿ ವಾದ ಮಾಡಲಿಕ್ಕಾಗದು. ವಾಸ್ತವವಾಗಿ, ದುರಾಸೆ, ಭ್ರಷ್ಟಾಚಾರ, ಅಪರಾಧ, ಹಿಂಸೆ – ಇವು ಏಕಚಕ್ರಾಧಿಪತ್ಯ ಹಾಗೂ ಊಳಿಗಮಾನ್ಯ ಪದ್ಧತಿಯಲ್ಲೇ ಕಣ್ಣೊಡೆದ ಅವಗುಣಗಳಾಗಿವೆ. ಜ್ಞಾನ, ರಾಜಕೀಯ, ಅಧಿಕಾರ ಅಥವಾ ಸಂಪನ್ಮೂಲಗಳನ್ನು ಹೊಂದಿದ್ದವರು ಉಳಿದವರ ಜೀವನ ವಿಧಾನವನ್ನು ನಿಯಂತ್ರಿಸುತ್ತಾ ತಮ್ಮ ಖಜಾನೆಯನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿದ್ದಾರೆ. ಚಾರಿತ್ರಿಕವಾದ ಈ ಸನ್ನಿವೇಶವನ್ನು ಗಮಿಸುವಾಗ ಮೊದಲೇ ಅಂತರ್ಗತವಾಗಿದ್ದ ನೇತ್ಯಾತ್ಮಕ ಗುಣಗಳು ಜಾಗತೀಕರಣ ಹಾಗೂ ಮುಕ್ತ ಮಾರುಕಟ್ಟೆಯ ಹಿನ್ನೆಲೆಯಲ್ಲಿ ಇನ್ನಷ್ಟು ಬಲಗೊಳ್ಳಲು ಕಾರಣ ವಾಯಿತೆನ್ನಬೇಕು.

ಇಂಥ ಸನ್ನಿವೇಶದಲ್ಲಿ ನಾವು ಮಾಡಬೇಕಾಗಿದ್ದು ಏನು? ಖಂಡಿತವಾಗಿ ನಾವು ಭಾರತದ ಪ್ರಜೆಗಳ ಜೀವನ ಮಟ್ಟ, ಉದ್ಯೋಗಾವಕಾಶ, ಶಿಕ್ಷಣ – ಇವುಗಳನ್ನೆಲ್ಲವನ್ನೂ ಮೇಲ್ಮಟ್ಟಕ್ಕೆ ಎತ್ತರಿಸಲು ಎಲ್ಲ ಉಪಾಯಗಳನ್ನೂ ಹುಡುಕಬೇಕು ಜನರಿಗೆ ಅರ್ಥಪೂರ್ಣವಾದ ರೀತಿಯಲ್ಲಿ ನಾವು ತಂತ್ರಜ್ಞಾನ ಅಥವಾ ಲಭ್ಯವಿರುವ ಬಂಡವಾಳವನ್ನು ಬಳಸಿದೆವಾದರೆ ಜಾಗತೀಕರಣ ನಮ್ಮ ಪ್ರಯತ್ನಗಳಿಗೆ ಪೂರಕವಾಗಿ ಒದಗಬಹುದು. ಆದರೆ ನಾವು ಅಂತರ್‌ರಾಷ್ಟ್ರೀಯ ಏಜೆನ್ಸಿಗಳು, ವಿದೇಶೀ

*(ಪುಟ 9ಕ್ಕೆ)*

# ಸಿಲ್ವರ್ ಗಾಂಧಿ

ಸಿಕಂದ್ರಾಬಾದ್ ಸ್ಟೇಷನ್ನಿನ ಹೊರಗೊಂದು ಪುಟ್ಟ ಗಾಂಧಿ ಇದೆ. ಇದೊಂದು ಬೆಳ್ಳಿ ಗಾಂಧಿ. ನಿಜವಾದ ಬೆಳ್ಳಿಯಲ್ಲ. ಇದು ಸಿಲ್ವರ್ ಪೇಂತ್ ಹೊಡೆಯಲಾಗಿರುವ ಗಾಂಧಿ.

ಹಾಗಂತ ಇದೊಂದು ಬರೇ ವಿಗ್ರಹವಲ್ಲ. ಇದಕ್ಕೆ ಹೊಟ್ಟೆ ಇದೆ. ಅದು ಏರಿಳಿಯುತ್ತದೆ. ಇದರ ಎದೆ ಢವಗುಟ್ಟುತ್ತದೆ. ರೆಪ್ಪೆಗಳು ಪಟ ಪಟ ಬೆರಳಿಗೆ ಸಿಕ್ಕ ಪತಂಗದಂತೆ ಹೊಡೆದುಕೊಳ್ಳುತ್ತವೆ. ಹಣೆಯ ಬದಿಗೆ ಧಾರಾಕಾರ ಬೆವರಿಗೆ ಬೆಳ್ಳಿ ಕರಗಿ ಹರಿದುಹೋದ ಪುಟ್ಟ ಕಪ್ಪು ಕಾಲುವೆಗಳು ತೋರುತ್ತವೆ.

ಹೌದು ಇವನೊಬ್ಬ ಏಳೆಂಟು ವರುಷದ ಎಳೆ ಬಾಲಕ. ಅವನ ತಲೆ ನುಣ್ಣಗೆ ಬೋಳಿಸಿ, ನಖಶಿಖಾಂತ ಅಗ್ಗದ ಸಿಲ್ವರ್ ಪೇಂಟ್ ಹೊಡೆಸಿ ಪುಟ್ಟ ಪಂಚೆ ಉಡಿಸಿ, ಕನ್ನಡಕ ದೊಣ್ಣೆ ಕೊಟ್ಟು ಅವನನ್ನು 'ಗಾಂಧಿ'ಗೊಳಿಸಿ ಭಿಕ್ಷೆಗೆ ನಿಲ್ಲಿಸಲಾಗಿದೆ.

ಅವ ಏನೂ ಹೇಳುವುದಿಲ್ಲ. ಹೊಳಪು ಕುಂದಿದ ಕಣ್ಣುಗಳಿಂದ ಕನ್ನಡಕದ ತೂತಿನಿಂದ, ಬರಹೋಗುವ ನಿಮ್ಮನ್ನೇ ನೋಡುತ್ತಾನೆ. ಅವನ ಕಾಲ ಬಳಿ ಹಾಸಿಟ್ಟ ಸಣ್ಣ ಟವಲ್ ಇದೆ. ಅದರ ಮೇಲೆ ನಾಣ್ಯಗಳಿವೆ.

ಅವನನ್ನು ನಿಲ್ಲಿಸಿ ಹೋದವರು ಇಲ್ಲೇ ಎಲ್ಲೋ ಇರಬಹುದು. ಅವನು ಮಾತ್ರ ಅಲುಗುವಂತಿಲ್ಲ. ಪುಟ್ಟ ಕಂಕುಳು, ಅಂಗೈ, ಹಿಮ್ಮಡಿಗಳಲ್ಲಿ ಸಿಲ್ವರ್ ಅಳಿಸಿ ಹೋದ ಈ ಭಗ್ನ ಮೂರ್ತಿ ಬಿಸಿಲೇರುತಿರುವಂತೆ ಕಣ್ಣು ಕುಕ್ಕುತ್ತದೆ.

ಅವನನ್ನು ನೋಡಿದ್ದೇ ಒಂದು ಕ್ಷಣ ಎಲ್ಲ ಸಣ್ಣಗೆ ಬೆಚ್ಚುತ್ತಾರೆ. ನಂತರ ವಿಚಿತ್ರವಾಗಿ ನಗುತ್ತಾರೆ. ನಗುತ್ತಲೇ ಒಳಗೇನೋ ಕುಸಿದಂತೆ ನಿರ್ವಿಣ್ಣರಾಗಿ ಮುಂದೆ ಹೋಗುತ್ತಾರೆ. ಮತ್ತೆ ಹಿಂದೆ ಹೊರಳಿ ನೋಡುವಷ್ಟು ಧೈರ್ಯವಂತರಲ್ಲ ಯಾರೂ.

ಜನ ಗಮನಿಸಿದ ಕುರುಹು ಕಂಡರೆ ಸಾಕು, ಈ ಪುಟ್ಟ ಬೆಳ್ಳಿಗಾಂಧಿ ಕೈಚಾಚುತ್ತಾನೆ. ಆ ಪುಟ್ಟ ಬೊಗಸೆಯಲ್ಲಿ ಲವಲೇಶ ಬೆಳ್ಳಿಯಿಲ್ಲ.

ಅವನ ಅಕ್ಕಪಕ್ಕದ ಇತರ ಬೀದಿ ಪೋರರು ಅವನ ಕೋಲು ಕನ್ನಡಕ ಕಸಿದುಕೊಂಡು ಓಡುವುದುಂಟು. ಆಗ ಈ ಗಾಂಧಿ ಅವರ ಬೆನ್ನಟ್ಟಿ ಹೋಗುತ್ತಾನೆ, ಕೂಗುತ್ತಾ, ಗೋಗರೆಯುತ್ತಾ, ಪರಚಿ ಬಡಿದಾಡುತ್ತ ತನ್ನ ಪ್ರಸಾಧನಗಳನ್ನು ಮರಳಿ ಪಡೆದು ಸ್ವಸ್ಥಾನಕ್ಕೆ ಮರಳುತ್ತಾನೆ. ನರ್ತಕಿಯೊಂದು ಮುದ್ರೆಗೆ ಮರಳಿದಂತೆ ಮತ್ತೆ ಕನ್ನಡಕ ಧರಿಸಿ, ಕೋಲೂರಿ ಒಂದು ಹಸ್ತ ಚಾಚಿ ಸ್ಥಿರವಾಗುತ್ತಾನೆ.

ಈ ಗಾಂಧಿ ನಿಶ್ಚಲನಲ್ಲ. ಅವನ ಠಿಕಾಣಿಗಳು ನಿಗದಿತವಾಗಿವೆ. ಆಫೀಸು ಸಮಯದ ವೇಳೆ ಆತ ಸರ್ದಾರ್ ಪಟೇಲ್ ಪ್ರಧಾನ ಸಿಗ್ನಲುಗಳ ಬಳಿ ನಿಲ್ಲುತ್ತಾನೆ. ಈ ರಸ್ತೆ ಏರ್‌ಪೋರ್ಟ್‌ನ ದಾರಿಯಲ್ಲಿದೆ. ಹೊಸ ಯುಗಕ್ಕೆ ಶರವೇಗದಿಂದ ಧಾವಿಸುತ್ತಿರುವ ಈ ರಸ್ತೆಯಲ್ಲಿ ಹಾಯುವ, ಸಿಗ್ನಲ್ ಬಳಿ ಕಾಯುವ ಕಾರುಗಳ ಗತ್ತೇ ಬೇರೆ. ಅವುಗಳಿಂದ ಸೂಸುವ ಪರಿಮಳ, ಕೇಳಿಬರುವ ಸಂಗೀತವೇ ಬೇರೆ. ಸಿಗ್ನಲ್ಲುಗಳಿಗಾಗಿ ಕಾದು ನಿಂತ ಇಂಥ ಫಳಫಳ ಕಾರುಗಳ ವಿಂಡ್‌ಸ್ಕ್ರೀನಿನಲ್ಲಿ (ಎದುರು ಗಾಜು) ಈ ಗಾಂಧಿ ಮೂಡಿ ಬಂದಾಗ ನೋಡಬೇಕು ಕಾರುಗಳ ಚಡಪಡಿಕೆ.

ಅವು ಇದ್ದಲ್ಲೇ ಕಂಗೆಡತೊಡಗುತ್ತವೆ. ತಮ್ಮ ಕಣ್ಣು ಮುಚ್ಚುತ್ತವೆ. ಬೇರೆಲ್ಲೋ ನೋಡುತ್ತವೆ. ಊಹೂಂ ಇಲ್ಲ. ಆದರೂ ಈ ಮರಿಗಾಂಧಿ ಕಣ್ಮರೆಯಾಗಿಲ್ಲ. ಹಾಗೇ ಎದುರು ಬಾನೆಟ್‌ಗೆ ಆತುಕೊಂಡು, ಒಂದು ಕೈ ಚಾಚಿಯೇ ಇದ್ದಾನೆ. ಕಣ್ಣು ತಪ್ಪಿಸದೇ ಮೆಲ್ಲಗೆ ಕಿಟಕಿಯೆಡೆ

✍ ಜಯಂತ ಕಾಯ್ಕಿಣಿ

ಸಮೀಪಿಸುತ್ತಿದ್ದಾನೆ. ದೇವರೇ ಸಿಗ್ನಲ್ ಹಸಿರಾಗಲಿ, ಹಾರ್ನುಗಳು ಅಬ್ಬರಿಸುತ್ತಿವೆ. ಬಂದ– ಗಾಂಧಿ ಬಂದೇ ಬಿಟ್ಟ ಕಿಟಕಿಯಲ್ಲಿ. ಅಗೋ ಸಿಗ್ನಲ್ ಹಸಿರು ಬದುಕಿದೆವೋ ಎಂದು ಕುಂಯ್ ಗುಟ್ಟಿ ಕಾರುಗಳೆಲ್ಲ ಚಿಮ್ಮಿ ಮುನ್ನುಗ್ಗುತ್ತವೆ.

ಈಗ ಗಾಂಧಿ ಕೋಲು ಕಂಕುಳಲ್ಲಿಟ್ಟುಕೊಂಡು, ಚಶ್ಮ ಕೈಲಿ ಹಿಡಕೊಂಡು, ಆಚೆ ಬದಿ ಕಾದ ವಾಹನಗಳತ್ತ ಪುಟು ಪುಟು ಓಡುತ್ತಿದ್ದಾನೆ. ವಿಶಾಲವಾದ ಹೆದ್ದಾರಿಯಲ್ಲಿ ಕೋಲು ಹಿಡಿದು ಓಡುತಿರುವ ಪುಟ್ಟ ಒಂಟಿ ಗಾಂಧಿ.

ಕಾರುಗಳ ಸಮಯ ಮುಗಿಯಲು ಬಂತೋ, ಗಾಂಧಿ ಈಗ 'ಆನಂದ್' ಥೇಟರಿನತ್ತ ಹೋಗುತ್ತಾನೆ. ಆನಂದ್ 70 mm. ಅಲ್ಲಿಯ ಪಾನ್‌ಶಾಪ್ ಪಕ್ಕ, ಮಿರ್ಚಿ ಗಾಡಿಯ ಪಕ್ಕ ಸುಳಿಯುತ್ತಿರುತ್ತಾನೆ. ಅವನನ್ನು ನೋಡಿದರೂ ನೋಡದವರಂತೆ ನಟಿಸಿ ನಾಗರಿಕರು ಮಿರ್ಚಿ ಮೆಲ್ಲುತ್ತ ಮುಂದುವರಿಯುತ್ತಾರೆ. ಆದರೂ ಅವರೆಲ್ಲರ ಕಡೆಗಣ್ಣಿನಲ್ಲಿ ಕಸದಂತೆ ಈತ ಸಿಕ್ಕೇ ಬಿಟ್ಟಿದ್ದಾನೆ. ಅವನನ್ನು ಹಿಂದೆ ಹಾಕಿದಷ್ಟೂ ಮನದಲ್ಲೇ ಬೆನ್ನು ಹತ್ತಿದ್ದಾನೆ. ಎಷ್ಟೂಂತ ಬೆನ್ನು ಹತ್ತಿಯಾನು? ದೀಪಗಳಾರಿ ಚಿತ್ರ ಶುರುವಾದದ್ದೇ ತೆಪ್ಪಗೆ ಕತ್ತಲಲ್ಲಿ ಇಳಿದು ಹೋಗುತ್ತಾನೆ.

ಹೊರಗೆ ವಿಚಿತ್ರವಾದ ಕತ್ತಲ ಹನಿ ಮಳೆಯಿದೆ. ಈ ಕತ್ತಲ ಮಳೆಯಲ್ಲಿ ಅವನು ನಡೆಯುತ್ತ,

ತನ್ನೆಲ್ಲ ಸಿಲ್ವರ್ ಬಣ್ಣವನ್ನು ಇಡೀ ಶಹರದ ಮಿನುಗಿಗೆ ಬಿಟ್ಟುಕೊಟ್ಟಿದ್ದಾನೆ. ಪೆಟ್ರೋಲ್ ಬಂಕಿನ ಬೆಳಕಿನಲ್ಲಿ ಕೂತು ನಾಣ್ಯಗಳನ್ನು ಎಣಿಸುತ್ತಾನೆ. ಅವನಲ್ಲೊಂದು ಗುಪ್ತ ಜಾಗ ಮಾಡಿ ಕೊಂಡಿದ್ದಾನೆ. ಅಲ್ಲಿ ಒಂದಿಷ್ಟು ನಾಣ್ಯ ಅಡಗಿಸಿಟ್ಟು ಉಳಿದ ಗಳಿಕೆಯೊಂದಿಗೆ ತನ್ನ 'ಪ್ರಾಯೋಜಕ'ರ ಕಡೆ ನಡೆಯುತ್ತಾನೆ. ಮೈಲ್ಗಲ್ಲೇ ರಸ್ತೆಗಿಳಿದು ಸಾಗಿದಂತೆ.

ರಾತ್ರಿ ಮುಚ್ಚಿದ ಪೇಟೆಯ ಫುಟ್‌ಪಾತಿನಲ್ಲಿ ಮಲಗಿರುವ ರಾಶಿ ಪೋರರಲ್ಲಿ ಇವನೂ ಇದ್ದಾನೆ. ದಿನಾ ಬೆಳಗೆದ್ದು ಯಾಕೆ ಮತ್ತೆ ಬಣ್ಣ ಬಳಿದುಕೋಬೇಕು ಎಂದು ಮೈ ತೊಳೆಯದೇ ಹಾಗೇ ಒರಗಿದ್ದಾನೆ. ಅದಕ್ಕೇ ಮತ್ತೆ ಎಂಥ ಕತ್ತಲಲ್ಲೂ ಹೊಳೆಯುತ್ತಿದ್ದಾನೆ. ಖಾಲಿ ಬೀದಿಯಲ್ಲಿ ಗಸ್ತು ತಿರುಗುತ್ತಿರುವ ಗಾಳಿಗೂ ಯಾಕೋ ಇವನ ಮೇಲೇ ಮಮತೆ ಬಂದಂತಿವೆ. ಮತ್ತೆ ಮತ್ತೆ ಅವನೆಡೆಗೇ ಸುಳಿಯುತ್ತಿದೆ. ಆಗ ಅವನೊಂದು ಭಗ್ಗನೆ ಉಜ್ವಲಗೊಂಡ ಬೆಳ್ಳಿ ಶಿಶು.

ಬೋಳು ತಲೆ, ಪಕ್ಕದಲ್ಲೇ ಮಡಿಸಿಟ್ಟ ಕನ್ನಡಕ. ಕೋಲು. ನಿದ್ದೆಯಲ್ಲೂ ಬೆಳ್ಳಿ ಶಿಶುವಿನ ಬೊಗಸೆ ಹಾಗೇ ಇದೆ. ಚಾಚಿಕೊಂಡಿದೆ.

ದೇಶದ ಟಂಕಸಾಲೆಯಲ್ಲಿ ನೈಟ್ ಶಿಫ್ಟಲ್ಲಿ, ಇವನ ಮುದ್ರೆ ಹೊತ್ತ ಹೊಸ ನಾಣ್ಯಗಳು ಟಕಟಕ ತಯಾರಾಗಿ ಕೆಳಗೆ ಬೀಳುತ್ತಿವೆ.

ಕೃಪೆ: ಬೊಗಸೆಯಲ್ಲಿ ಮಳೆ

# ಗಾಂಧಿಯ ಪ್ರಸ್ತುತತೆ

ಬಂಡವಾಳ ಹೂಡಿಕೆದಾರರು ಮತ್ತು ಹೊರಗಿನ ಸರ್ಕಾರಗಳ ವಿಷಯದಲ್ಲಿ ಸರ್ವದಾ ಜಾಗರೂಕರಾಗಿರಬೇಕು. ಭಾರತೀಯ ಪರಿಸರಕ್ಕೆ ಹೊಂದಾಣಿಕೆಯಾಗುವುದೇ ಎಂಬ ಏಕೈಕ ಮಾನದಂಡ ನಮ್ಮ ಸ್ವೀಕೃತಿಯನ್ನು ಅನವರತ ನಿರ್ದೇಶಿಸಬೇಕು. ಆರ್ಥಿಕವಾಗಿ ಪ್ರಗತಿ ಸಾಧಿಸುವುದು ಎಂದರೆ ನಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವುದು ಎಂದರ್ಥ. ಈ ನಿಟ್ಟಿನಲ್ಲಿ ಗಾಂಧಿಜೀಯವರು ಭೋಧಿಸಿದ ಸತ್ಯ, ಅಹಿಂಸೆ, ಮಾನವ ಪ್ರಯತ್ನ, ವಿಕೇಂದ್ರಿಕರಣ, ಸಾಮಾಜಿಕ ಜವಾಬ್ದಾರಿ ಹಾಗೂ ಸ್ವನಿಯಂತ್ರಣ ಅತ್ಯಂತ ಪ್ರಮುಖ ತತ್ವಗಳಾಗಿ ಮೇಲೆ ಕಾಣಿಸಿಕೊಳ್ಳುತ್ತವೆ. ಆದರೆ ಮಾರುಕಟ್ಟೆ ಸಂಸ್ಕೃತಿಯ ಮಾರಿ ಕೂಗಿನಲ್ಲಿ ಆತ್ಮಸಾಕ್ಷಿಯ ಮೆಲುದನಿಯನ್ನು ಕೇಳಿಸಿಕೊಳ್ಳುವವರಾರು ಎಂಬುದು ಯಕ್ಷ ಪ್ರಶ್ನೆಯಾಗಿದೆ.

ಉಲ್ಲೇಖಗಳು


1. 'ರಿ ಥಿಂಕಿಂಗ್ ಗಾಂಧಿ ಇನ್ ದ ಕಾಂಟೆಕ್ಸ್ಟ್ ಆಫ್ ಗ್ಲೋಬಲೈಸೇಷನ್' –ವಿಸ್ತಾರ್ 1997
2. 'ಸರ್ವೋದಯ'
   'ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್' – ನ್ಯೂಯಾರ್ಕ್, ಎನ್ ವೈ. 10017 ಯು.ಎಸ್.ಎ.


## AWARD TO R. VEDAVALLI

Dr. H.R. Bhardwaj, Governor of Karnataka, conferred this year's "VEENA SESHANNA MEMORIAL NATIONAL AWARD" on Dr. SUMA SUDHINDRA, internationally acclaimed Veena player and "SWARAMURTHY V.N. RAO MEMORIAL NATIONAL AWARD" on Smt. R. VEDAVALLI, veteran vocalist, recently. Each award carries Rs. 50,000/- cash and a bust of Veena Seshanna. The function was held at the Raj Bhavan, Bangalore, under the joint auspices of Tumkur University and Swaramurthy V.N. Rao Memorial Trust. Veteran dancer Dr. Vyjayanthimala Bali, Dr. Veerendra Heggade, Dr. A.H. Rama Rao and Prof. B.K. Chandrasekhar - were the guests of honour on the occasion.

A Music Festival called 'Veeneya Bedagu' was also held at the Tumkur University Campus, the same day evening, wherein R. Vedavalli, Bombay Jayashree (vocal) and Dr. Suma Sudhindra - gave music concerts.

Governor also announced Honorary Doctorate to Smt. R. Vedavalli to be conferred by the Tumkur University, shortly.



Veena Player Dr. Suma Sudhindra (first from left), received the Veena Seshanna Memorial Award while Smt. R. Vedavalli (second from left) was conferred with "Swaramurthy V.N. Rao Memorial Award" (50,000 Rs. each), recently. In the picture you can also see Prof. B.K. Chandrasekhar, Dr. Vyjayanthimala Bali, Dr. H.R. Bhardwaj, Governor of Karnataka and Smt. Prafulla Bhardwaj, at the function held at Raj Bhavan, Bangalore, recently.

Prof. MYSORE V. SUBRAMANYA
Chairman & Managing Trustee

# ಅಮೆರಿಕದ ಕನ್ನಡ ಸಾಹಿತ್ಯ ರಂಗ

ಪ್ರಿಯ ಕನ್ನಡ ಬಾಂಧವರೆ,

ಮೊದಲಾಗಿ ಮುಂಬೈ ಮಹಾನಗರದಲ್ಲಿ ಮತ್ತು ಸುತ್ತಮುತ್ತ ನೆಲಸಿರುವ ಸಹಸ್ರಾರು ಕನ್ನಡಿಗರೆಲ್ಲರಿಗೂ ಅಮೆರಿಕದ ಕನ್ನಡ ಸಾಹಿತ್ಯ ರಂಗದ ಪರವಾಗಿ ಸ್ನೇಹಪೂರ್ಣ ಶುಭಾಶಯಗಳನ್ನು ಸಲ್ಲಿಸಿ, ರಂಗದ ಬಗ್ಗೆ ಕೆಲವು ಮಾತುಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ. ಕನ್ನಡ ಸಾಹಿತ್ಯ ರಂಗದ ಉಗಮ, ಅದರ ಧ್ಯೇಯಗಳು, ಅದು ಇದುವರೆಗೆ ಮಾಡಿರುವ ಕೆಲಸ, ಅದರ ದೃಷ್ಟಿ – ಇವನ್ನು ಕುರಿತು ಇಲ್ಲಿ ನಿಮ್ಮೊಂದಿಗೆ ಅನೌಪಚಾರಿಕವಾಗಿ ಹೇಳುವುದು ನನ್ನ ಉದ್ದೇಶ.

ಸದ್ಯದಲ್ಲಿ ಅಮೆರಿಕದಲ್ಲಿ ೩ ಮಿಲಿಯನ್ ಅಥವ ೩೦ ಲಕ್ಷ ಭಾರತೀಯರಿದ್ದಾರೆ (ಹೆಚ್ಚಿನ ವಿವರಗಳಿಗೆ ಅಂತರ್ಜಾಲ ನೋಡಬಹುದು). ಆದರೆ ಇದರಲ್ಲಿ ಎಷ್ಟು ಮಂದಿ ಕನ್ನಡಿಗರು ಎಂಬ ಮಾಹಿತಿ ದೊರಕುವುದು ಕಷ್ಟ. ಆ ಕೆಲಸವನ್ನು ನಮ್ಮ ಕನ್ನಡ ಸಂಸ್ಥೆಗಳೇ ಮುತುವರ್ಜಿ ವಹಿಸಿ ಮಾಡಬೇಕು ಎನ್ನಿಸುತ್ತದೆ. ಕನ್ನಡ ಕೂಟಗಳ ಸದಸ್ಯ ಸಂಖ್ಯೆಯ ಆಧಾರದ ಮೇಲೆ ನಾವು ಮಾಡಿದ ಒಂದು ಅನಧಿಕೃತ ಅಂದಾಜಿನ ಪ್ರಕಾರ ಅಮೆರಿಕದಲ್ಲಿ ಸುಮಾರು ೨೫,೦೦೦ – ೩೦,೦೦೦ ಕುಟುಂಬಗಳಾದರೂ ಇರಬಹುದು. ಈ ಜನ ದೇಶಾದ್ಯಂತ ಸಮವಾಗಿ ಹಂಚಿಲ್ಲ. ಬಹಳಷ್ಟು ಮಂದಿ ಕ್ಯಾಲಿಫ಼ೋರ್ನಿಯ, ನ್ಯೂ ಯಾರ್ಕ್, ನ್ಯೂ ಜೆರ್ಸಿ, ಮೇರೀಲ್ಯಾಂಡ್, ವಾಷಿಂಗ್ಟನ್ ಡಿ.ಸಿ., ವರ್ಜಿನಿಯ, ಟೆಕ್ಸಸ್, ಇಲಿನಾಯ್ ಮುಂತಾದ ರಾಜ್ಯಗಳಲ್ಲಿ ಕೇಂದ್ರೀಕೃತವಾಗಿದ್ದಾರೆ.

ಇಷ್ಟು ದೊಡ್ಡ ಜನಸಂಖ್ಯೆಯ, ಹಾಗೂ ಎಚ್ಚೆತ್ತ ಮನೋಭಾವವುಳ್ಳ ಕನ್ನಡಿಗರ ಸಾಂಸ್ಕೃತಿಕ ಅಭಿಲಾಷೆಗಳನ್ನು ಪೂರೈಸಲು ಅನೇಕಾನೇಕ ಕನ್ನಡ ಕೂಟಗಳು ಸ್ಥಾಪಿತವಾಗಿವೆ. ಒಟ್ಟಿನಲ್ಲಿ ಸುಮಾರು ೩೫–೪೦ ಕನ್ನಡ ಸಂಸ್ಥೆಗಳಿವೆ. ಇವುಗಳಲ್ಲಿ ಉತ್ತರ ಕ್ಯಾಲಿಫ಼ೋರ್ನಿಯಾದ ಕನ್ನಡ ಕೂಟದಂಥ ಬೃಹತ್ ಸಂಸ್ಥೆಗಳಿಂದ ಹಿಡಿದು ಚಿಕ್ಕ ಊರುಗಳಲ್ಲಿ ಹತ್ತಾರು ಜನ ಸೇರಿ ನಡೆಸುವ ಅನೌಪಚಾರಿಕ ಸಂಸ್ಥೆಗಳೂ ಇವೆ. ಈ ಎಲ್ಲ ಸಂಸ್ಥೆಗಳೂ ವರ್ಷದಲ್ಲಿ ಆರೇಳು ಸಲ ಕಲೆತು ಯುಗಾದಿಯಿಂದ ದೀಪಾವಳಿಯವರೆಗೆ ಹಬ್ಬಗಳನ್ನಾಚರಿಸಿ ಕನ್ನಡಿಗರ ಮನತುಂಬಿಸುತ್ತಾರೆ. ಮಿತ್ರರ ಸಹವಾಸ, ಯುವ ದಂಪತಿಗಳ ಹರ್ಷ, ಅವರು ಭಾರತದಿಂದ ಕರೆತಂದ ತಮ್ಮ ಹಿರಿಯ ತಂದೆತಾಯಿಯರ ಸಂತೃಪ್ತಿ, ಮಕ್ಕಳ ಕೇಕೆ–ನಗುಮೊಗ, ರೇಶ್ಮೆ ಸೀರೆಗಳ ಸರಸರ, ಬಿಸಿಬೇಳೆಯಿಂದ ಹಿಡಿದು ನಮಗೆ ಪ್ರಿಯವಾದ ನಾನಾ ಅಡಿಗೆಗಳನ್ನುಳ್ಳ ಮೃಷ್ಟಾನ್ನ ಭೋಜನ, ನಾಟಕ, ಲಘುಸಂಗೀತ – ಎಲ್ಲವೂ ಉಂಟು. ಈಗಂತೂ ಎರಡು ವರ್ಷಕ್ಕೊಮ್ಮೆ ಅಮೆರಿಕದ ಮುಖ್ಯ ಪಟ್ಟಣಗಳಲ್ಲಿ ನಡೆಯುವ ಅಕ್ಕ ಸಮ್ಮೇಳನದ ಅದ್ಧೂರಿಯನ್ನು ನೋಡೇ ಅರಿಯಬೇಕು. ಹೊರದೇಶವೊಂದರಲ್ಲಿ ನಾಲ್ಕಾರು ಸಾವಿರ ಕನ್ನಡಿಗರನ್ನು ಒಂದೇ ಚಾವಣಿಯ ಕೆಳಗೆ ನೋಡುವ ಸಂತಸ ಯಾರಿಗೆ ಬೇಡ? ೨೦೧೦ರಲ್ಲಿ ನಾವಿಕ ಎಂಬ ಹೊಸ ಸಂಸ್ಥೆ ಇದೇ ರೀತಿ ಒಂದು ದೊಡ್ಡ ಸಮ್ಮೇಳನವನ್ನು ಕ್ಯಾಲಿಫ಼ೋರ್ನಿಯಾದಲ್ಲಿ ನಡೆಸಿತು.

ಆದರೆ...ಆದರೆ...ಇವೆಲ್ಲ ಬಹುಮಟ್ಟಿಗೆ ಮನರಂಜಕ, ಸಾಂಸ್ಕೃತಿಕ ಮತ್ತು ಈಚೆಗೆ ಸ್ವಲ್ಪಮಟ್ಟಿಗೆ ವಾಣಿಜ್ಯ–ವ್ಯಾವಹಾರಿಕ ಕಾರ್ಯಕ್ರಮಗಳು. ಇಲ್ಲಿನ ಕೂಟಗಳ ಮೂಲೋದ್ದೇಶ ಸಾಂಸ್ಕೃತಿಕ ಸಂಘಟನೆ. ಅಲ್ಲಿ ಸಾಹಿತ್ಯಕ್ಕೆ ಸ್ವಲ್ಪ ಅವಕಾಶವಿದ್ದರೂ ಅದೇ ಪ್ರಧಾನವಲ್ಲ. ಸಾಧಾರಣವಾಗಿ ಯಾವಾಗಲೂ ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯುಳ್ಳ ಜನ ಅಲ್ಪಸಂಖ್ಯಾತರೇ. ಅವರನ್ನು ಮೆಚ್ಚಿಸಲು ಎಲ್ಲರ ಮೇಲೂ ಸಾಹಿತ್ಯ ಕಾರ್ಯಕ್ರಮಗಳನ್ನು ಹೇರಲಾಗುವುದಿಲ್ಲ.

ಅಮೆರಿಕದಲ್ಲಿ ಎಷ್ಟೋ ಜನ ಪ್ರತಿಭಾವಂತ ಲೇಖಕರಿದ್ದಾರೆ. ಹೊಸ ಸಂಸ್ಕೃತಿಗೆ, ಹೊಸ ಜೀವನಕ್ರಮಕ್ಕೆ, ಹೊಸ ಆಲೋಚನೆಗಳಿಗೆ ಮನಸ್ಸು ತೆರೆದುಕೊಂಡಿರುವ ಸಂವೇದನಾಶೀಲ ಚಿಂತಕರು ಬರಹಗಾರರಿದ್ದಾರೆ. ಅಂಥವರು ಕೆಲವರ ಪುಸ್ತಕಗಳು ಕರ್ನಾಟಕದಲ್ಲಿ (ಮುಖ್ಯವಾಗಿ ಬೆಂಗಳೂರಲ್ಲಿ) ಪ್ರಕಟಗೊಳ್ಳುತ್ತಿದ್ದುವು. ಆದರೆ ಅವು ಬಾಯಿಮಾತಿನಿಂದ ಇತರರಿಗೆ ತಿಳಿಯುತ್ತೇ ವಿನಃ ಅವಕ್ಕೆ ಬೇರಾವ ಪ್ರಚಾರವೂ ಸಿಕ್ಕುತ್ತಿರಲಿಲ್ಲ. ಅವನ್ನು ಕೊಳ್ಳಲು, ಅವುಗಳನ್ನು ಸಮಾನ ಮನಸ್ಕರೊಡನೆ ಚರ್ಚಿಸಲು ಆಗುತ್ತಿರಲಿಲ್ಲ. ಲೇಖಕರ ಪಾಡೂ ಅಷ್ಟೆ – ತಮ್ಮ ಪುಸ್ತಕ ಪ್ರಕಟವಾದ ಮೇಲೆ ಅದರ ಗತಿ ಏನಾಯಿತು ಎಂದು ಅವರಿಗೇ ತಿಳಿಯುತ್ತಿರಲಿಲ್ಲ.

ಈ ಸಂದರ್ಭದಲ್ಲಿ ನಾವು ಹಲವರು ಸಾಹಿತ್ಯಾಸಕ್ತರು ಇದಕ್ಕೆ ತಕ್ಕ ಪರಿಹಾರ ಏನೆಂದು ಯೋಚಿಸಿ ಸಾಹಿತ್ಯಕ್ಕಾಗಿಯೇ ಒಂದು ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ನಿರ್ಧಾರಕ್ಕೆ ಬಂದೆವು. ಒಂದೊಂದು ಊರಿಂದಲೂ ೧೦–೧೫ ಮಂದಿ ಸೇರಿದರೂ ನಮ್ಮ ಸಂಸ್ಥೆಗೆ ಸಾಕಷ್ಟು ಸದಸ್ಯರು ಸಿಕ್ಕಹಾಗಾಯಿತು ಎಂಬುದು ನಮ್ಮ ಯೋಚನೆ. ಅದರ ಫಲವೇ ೨೦೦೩–೦೪ ರಲ್ಲಿ ವೈತಾಳಿದ ಕನ್ನಡ ಸಾಹಿತ್ಯ ರಂಗ. ಸಾಹಿತ್ಯಕ್ಕಾಗಿಯೇ ಸಂಪೂರ್ಣವಾಗಿ ಮೀಸಲಾದ, ಅಮೆರಿಕದ ಏಕೈಕ ರಾಷ್ಟ್ರೀಯ ಸಂಸ್ಥೆ ಇದು. ನ್ಯೂ ಜೆರ್ಸಿ ರಾಜ್ಯದಲ್ಲಿ ಇದು ಲಾಭೋದ್ದೇಶವಿಲ್ಲದ, ಸಾಂಸ್ಕೃತಿಕ, ಶೈಕ್ಷಣಿಕ ಸಂಸ್ಥೆಯಾಗಿ ಅಧಿಕೃತವಾಗಿ ದಾಖಲಾಗಿದೆ; ಅಮೆರಿಕದ ಆದಾಯ ತೆರಿಗೆ ಮಂಡಲಿ ಇದಕ್ಕೆ ತೆರಿಗೆ ವಿನಾಯಿತಿಯನ್ನೂ ನೀಡಿದೆ.

ಕನ್ನಡ ಸಾಹಿತ್ಯ ರಂಗದ ಮುಖ್ಯ ಉದ್ದೇಶಗಳು ಇವು: ಇಲ್ಲಿ ಅಮೆರಿಕದಲ್ಲಿ ನೆಲಸಿರುವ ಕನ್ನಡ ಸಾಹಿತ್ಯಾಸಕ್ತರನ್ನೆಲ್ಲ ಒಂದುಗೂಡಿಸಿ ಅವರ ವಿಚಾರ ವಿನಿಮಯಕ್ಕಾಗಿ ಒಂದು ಸತ್ವಶಾಲಿಯಾದ ವೇದಿಕೆಯನ್ನು ಒದಗಿಸುವುದು; ಇಲ್ಲಿನ ಕನ್ನಡಿಗರ ಸಾಹಿತ್ಯಾಸಕ್ತಿಯನ್ನು ಪೋಷಿಸುವುದು, ಬೆಳಸುವುದು; ಅವರನ್ನು ತಮ್ಮ ಅನುಭವಗಳ ಬಗ್ಗೆ ಸೃಜನಾತ್ಮಕವಾಗಿ ಬರೆಯಲು ಪ್ರೋತ್ಸಾಹಿಸುವುದು, ಅವರ ಬರವಣಿಗೆಗಳನ್ನು ಪ್ರಕಟಿಸುವುದು, ಅವನ್ನು ಸಾಧ್ಯವಾದಷ್ಟು ಮಂದಿ ಕನ್ನಡಿಗರ ಗಮನಕ್ಕೆ ತರುವುದು.

ಧ್ಯೇಯಗಳನ್ನು ಬರೆಯುವುದು ಸುಲಭ; ಅವನ್ನು ಆಚರಣೆಗೆ ತರುವುದು ಹೇಗೆ? ಈ ಬಗ್ಗೆ ರಂಗ ಸಾಕಷ್ಟು ಯೋಚಿಸಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ಅವನ್ನು ಇಲ್ಲಿ ಸ್ಥೂಲವಾಗಿ ಕೊಡುತ್ತಿದ್ದೇನೆ.

ನಮ್ಮ ಕಾರ್ಯಕ್ರಮಗಳಲ್ಲಿ ಮುಖ್ಯವಾದದ್ದು ಎರಡು ವರ್ಷಕ್ಕೊಮ್ಮೆ ನಾವು ನಡೆಸುವ ವಸಂತ ಸಾಹಿತ್ಯೋತ್ಸವ. ಸಾಧಾರಣವಾಗಿ ಇದು ಮೇ ತಿಂಗಳಲ್ಲಿ ನಡೆಯುತ್ತದೆ (ಇಲ್ಲಿನ ವಸಂತ ಕಾಲ ಸುಮಾರು ಮಾರ್ಚ್ ೨೧ ರಿಂದ ಜೂನ್ ೨೧ರ ವರೆಗೆ). ನಮ್ಮದು ರಾಷ್ಟ್ರೀಯ ಸಂಸ್ಥೆಯಾಗಿದ್ದು, ನಮ್ಮ ಸದಸ್ಯರು ಅಮೆರಿಕದ ಎಲ್ಲ ಕಡೆಗಳಿಂದ ಬಂದವರಾದ್ದರಿಂದಲೂ, ವಿವಿಧ ಭಾಗಗಳಲ್ಲಿರುವ ನಮ್ಮ ಜನರಲ್ಲಿ ಸಾಹಿತ್ಯಾಸಕ್ತಿಯನ್ನು ಮೂಡಿಸಬೇಕೆಂಬ ಸದುದ್ದೇಶದಿಂದಲೂ, ಅಲ್ಲದೆ ಬೇರೆ ಬೇರೆ ಸ್ಥಳಗಳಲ್ಲಿ ನೆಲಸಿದ ಸಾಹಿತ್ಯಾಸಕ್ತರಿಗೆ ತಮಗಾಗಿಯೇ ಇಂಥ ಒಂದು ಸಂಸ್ಥೆ ಇದೆ ಎಂದು ತಿಳಿಯಪಡಿಸುವ ಉದ್ದೇಶದಿಂದಲೂ ಈ ಸಮ್ಮೇಳನವನ್ನು ದೇಶದ ವಿವಿಧ ಪ್ರಮುಖ ಪಟ್ಟಣಗಳಲ್ಲಿ ನಡೆಸುತ್ತೇವೆ. ಇದುವರೆಗೆ ಈ ಸಮ್ಮೇಳನ ಫ಼ಿಲಡೆಲ್ಫ಼ಿಯ, ಲಾಸ್ ಏಂಜಲಿಸ್,

ಚಿಕಾಗೊ, ರಾಕ್‌ವಿಲ್ (ಮೇರಿಲ್ಯಾಂಡ್‌ನಲ್ಲಿ, ಬಾಲ್ಟಿಮೋರ್–ವಾಷಿಂಗ್ಟನ್ ಡಿ.ಸಿ. ನಡುವೆ) ಮತ್ತು ಸಾನ್ ಫ್ರಾನ್ಸಿಸ್ಕೋ ನಗರಗಳಲ್ಲಿ ನಡೆದಿದೆ. ಮುಂದಿನ ಸಮ್ಮೇಳನ ಟೆಕ್ಸಸ್ ರಾಜ್ಯದ ಹ್ಯೂಸ್ಟನ್‌ನಲ್ಲಿ ನಡೆಯುವ ಸಿದ್ಧತೆ ಮೊದಲಾಗಿದೆ.

ನಮ್ಮ ಪ್ರತಿ ಸಮ್ಮೇಳನವನ್ನೂ ಅಲ್ಲಿನ ಸ್ಥಳೀಯ ಕನ್ನಡ ಕೂಟದ ಸಹಯೋಗದಿಂದ ನಡೆಸುತ್ತೇವೆ. ಇದು ನಮಗೆ ಅಗತ್ಯವೂ ಹೌದು. ಅಲ್ಲದೆ, ಇದರಲ್ಲಿ ಸ್ಥಳೀಯ ಸಂಸ್ಥೆಗೆ ಯಾವ ಆರ್ಥಿಕ ಹೊಣೆಗಾರಿಕೆಯೂ ಇಲ್ಲದಂತೆ ನಾವು ನೋಡಿಕೊಳ್ಳುವುದರಿಂದ, ಅವರಿಗೂ ಇಂಥ ಒಂದು ಸಾಹಿತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

ಸುಮಾರು ಹದಿನಾಲ್ಕು ಗಂಟೆಗಳ ನಮ್ಮ ಕಾರ್ಯಕ್ರಮಗಳು ಎರಡು ದಿನದ ಹಾಸಿನಲ್ಲಿ ನಡೆಯುತ್ತವೆ. ಸಮ್ಮೇಳನಕ್ಕೆ ದೇಶದ ವಿವಿಧ ರಾಜ್ಯಗಳಿಂದ ನೂರಾರು ಮೈಲಿ ಪ್ರಯಾಣ ಮಾಡಿ ಜನ ಬರುತ್ತಾರೆ. ಪ್ರತಿ ಸಮ್ಮೇಳನಕ್ಕೂ ಒಬ್ಬರಿಬ್ಬರು ಖ್ಯಾತ ಲೇಖಕರನ್ನು ಕರ್ನಾಟಕದಿಂದ ಕರೆಸುತ್ತೇವೆ. ಈ ಆಯ್ಕೆ ಸಮ್ಮೇಳನದ ಅಥವ ನಾವು ಸಮ್ಮೇಳನದ ಅಂಗವಾಗಿ ಹೊರತರುವ ಪುಸ್ತಕದ ಮೂಲ ಚಿಂತನೆಯನ್ನು (theme) ಅವಲಂಬಿಸಿರುತ್ತದೆ. ಇದುವರೆಗೆ ನಮ್ಮ ಆಹ್ವಾನವನ್ನು ಮನ್ನಿಸಿ ಸರ್ವಮಾನ್ಯರಾದ ಡಾ. ಪ್ರಭುಶಂಕರ, ಪ್ರೊ. ಬರಗೂರು ರಾಮಚಂದ್ರಪ್ಪ, ಪ್ರೊ. ಅ. ರಾ. ಮಿತ್ರ, ಡಾ. ಎಚ್.ಎಸ್. ರಾಘವೇಂದ್ರ ರಾವ್, ಡಾ. ವೀಣಾ ಶಾಂತೇಶ್ವರ, ಶ್ರೀಮತಿ ವೈದೇಹಿ, ಡಾ. ಸುಮತೀಂದ್ರ ನಾಡಿಗ, ಶ್ರೀಮತಿ ಭುವನೇಶ್ವರಿ ಹೆಗಡೆ – ಇವರು ನಮ್ಮ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಮುಖ್ಯ ಅತಿಥಿಗಳ ಭಾಷಣವನ್ನು ಪ್ರತ್ಯೇಕವಾಗಿ ಸಂಪೂರ್ಣವಾಗಿ ಮುದ್ರಿಸಿ ಎಲ್ಲ ನೋಂದಣಿದಾರರಿಗೂ ಉಚಿತವಾಗಿ ಕೊಡುತ್ತೇವೆ.

ಪ್ರತಿ ಸಮ್ಮೇಳನದ ಅಂಗವಾಗಿ ನಾವು ಕೈಗೊಳ್ಳುವ ಒಂದು ಮುಖ್ಯ ಕೆಲಸ ಇಲ್ಲಿನವರ ಬರಹಗಳನ್ನೊಳಗೊಂಡ ಸುಮಾರು ೩೦೦ ಪುಟಗಳ ಒಂದು ಪುಸ್ತಕ ಪ್ರಕಟಿಸುವುದು. ಮೊದಲ ಪುಸ್ತಕದ ಹೊರತು ಉಳಿದೆಲ್ಲ ಪುಸ್ತಕಗಳೂ ಸಂಪೂರ್ಣವಾಗಿ ಇಲ್ಲಿನವರು ಬರೆದ ಲೇಖನಗಳಿಂದಲೇ ಕೂಡಿವೆ (ಮುನ್ನುಡಿ, ಬೆನ್ನುಡಿ ಇತ್ಯಾದಿ ಬಿಟ್ಟು). ಸಮ್ಮೇಳನದ ಮುಖ್ಯ ಚಿಂತನೆಗನುಸಾರವಾಗಿ ನಮ್ಮ ಪುಸ್ತಕಗಳು ಈ ವಿಷಯಗಳನ್ನು ಕುರಿತಾಗಿವೆ: ಕುವೆಂಪು ಸಾಹಿತ್ಯ ಸಮೀಕ್ಷೆ ( ಕುವೆಂಪು ಜನ್ಮ ಶತಮಾನೋತ್ಸವ, ೨೦೦೪); ಆಚೀಚೆಯ ಕತೆಗಳು (ಕನ್ನಡದಲ್ಲಿ ಸೃಜನಶೀಲತೆ, ೨೦೦೫); ನಗೆಗನ್ನಡಂ ಗೆಲ್ಗೆ! (ಕನ್ನಡ ಸಾಹಿತ್ಯದಲ್ಲಿ ಹಾಸ್ಯಶೀಲತೆ, ೨೦೦೭); ಕನ್ನಡ ಕಾದಂಬರಿ ಲೋಕದಲ್ಲಿ...ಹೀಗೆ ಹಲವು... (ಕಳೆದ ೨೫ ವರ್ಷದ ಪ್ರಮುಖ ಕನ್ನಡ ಕಾದಂಬರಿಗಳ ಸಮೀಕ್ಷೆ, ೨೦೦೯); ಮತ್ತು ಮಥಿಸಿದಷ್ಟೂ ಮಾತು (ಕನ್ನಡದಲ್ಲಿ ಪ್ರಬಂಧ ಸಾಹಿತ್ಯ, ೨೦೧೧). ಈ ಪುಸ್ತಕಗಳನ್ನು ನಾವು ಬೆಂಗಳೂರಿನ ಖ್ಯಾತ ಪ್ರಕಾಶಕರಾದ ಅಭಿನವ ಅವರ ಸಹಯೋಗದಿಂದ ಪ್ರಕಟಿಸಿದ್ದೇವೆ. ಈ ಪುಸ್ತಕಗಳಲ್ಲಿ ಕುತೂಹಲ ಉಳ್ಳವರು ದಯವಿಟ್ಟು ಅಭಿನವ ಅವರನ್ನು ಸಂಪರ್ಕಿಸಬೇಕೆಂದು ಕೋರುತ್ತೇನೆ (ಅವರ ವಿಳಾಸ: abhinavaravi@gmail.com). ಅಥವ ನನ್ನನ್ನು ಸಂಪರ್ಕಿಸಬಹುದು. ಈ ಪುಸ್ತಕಗಳಿಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯುತ್ತಮ ಲೇಖಕರಾಗಿ ಕೀರ್ತಿಪಡೆದಿರುವ ಡಾ. ಜಿ.ಎಸ್. ಶಿವರುದ್ರಪ್ಪ, ಶ್ರೀ ಯಶವಂತ ಚಿತ್ತಾಲ, ಶ್ರೀ ಚಿ. ಶ್ರೀನಿವಾಸ ರಾಜು, ಡಾ. ಎಚ್.ಎಸ್. ರಾಘವೇಂದ್ರ ರಾವ್, ಡಾ. ಜಿ. ಎಸ್. ಆಮೂರ್, ಶ್ರೀಮತಿ ವೈದೇಹಿ, ಡಾ. ರಹಮತ್ ತರೀಕೆರೆ, ಶ್ರೀ ಜಯಂತ್ ಕಾಯ್ಕಿಣಿ ಇವರು ವಿಮರ್ಶಾತ್ಮಕವಾಗಿ ಮುನ್ನುಡಿ, ಬೆನ್ನುಡಿಗಳನ್ನು ಬರೆದು ನಮ್ಮನ್ನು ಪ್ರೋತ್ಸಾಹಿಸಿದ್ದಾರೆ. ವಿಮರ್ಶಕರು ಇವುಗಳಲ್ಲಿನ ಸತ್ವವನ್ನು ಗುರುತಿಸಿ ಮೆಚ್ಚಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಾಸ್ಯದ ಬೆಳವಣಿಗೆಯನ್ನು ವೀಕ್ಷಿಸುವ ಗ್ರಂಥ ನಗೆಗನ್ನಡಂ ಗೆಲ್ಗೆ! ಮತ್ತು ಕಳೆದ ಕಾಲು ಶತಮಾನದ ಪ್ರಮುಖ ಕನ್ನಡ ಕಾದಂಬರಿಗಳನ್ನು ಒಂದೇ ಕಡೆ ಅವಲೋಕಿಸುವ ಕನ್ನಡ ಕಾದಂಬರಿ ಲೋಕದಲ್ಲಿ...ಹೀಗೆ ಹಲವು... ಪುಸ್ತಕಗಳನ್ನು ಕುರಿತು ಕನ್ನಡದಲ್ಲಿ ಇಂಥ ಪುಸ್ತಕಗಳು ಬರುತ್ತಿರುವುದು ಇದೇ ಮೊದಲು ಎಂದು ಹಲವರು ವಿದ್ವಾಂಸರು ಹೇಳಿದ್ದಾರೆ. ನಮ್ಮ ಪುಸ್ತಕಗಳ ಮೂಲಕ ಮೊದಲ ಬಾರಿಗೆ ತಮ್ಮ ಲೇಖನ ಪ್ರಕಟವಾದುದರ ಬಗ್ಗೆ ತಮಗಾದ ಹಿಗ್ಗನ್ನು ಅನೇಕ ಯುವ ಲೇಖಕರು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.

ನಮ್ಮ ೨೦೧೩ರ ಪ್ರಕಟನೆಯ ಮುಖ್ಯ ವಸ್ತು – ಅಮೆರಿಕದಲ್ಲಿ ನಮ್ಮ ಬದುಕು. ನಮ್ಮ ಸಂಪಾದಕರು ಹೇಳುವಂತೆ, ನಮ್ಮ ನಿಮ್ಮ ನಿತ್ಯ ಜೀವನ, ವೃತ್ತಿ ಜೀವನ, ಮನೆ/ನೆರೆಹೊರೆ, ಶಾಲೆ/ಕಾಲೇಜು ಪರಿಸರ, ಕಂಡದ್ದು, ಕೇಳಿದ್ದು, ಆಡಿದ್ದು, ಹಾಡಿದ್ದು, ತಿರುಗಿದ್ದು, ಮರುಗಿದ್ದು, ಹೊರಳಿದ್ದು, ನರಳಿದ್ದು, ಬಿದ್ದದ್ದು, ಎದ್ದದ್ದು...ಇನ್ನೂ ಏನೇನನ್ನು ಮಾಡಿದ್ದೇವೆ ಯಾ ಮಾಡಿಲ್ಲ, ಈ ಹೊಸ ನೆಲೆಯಿಂದ ನಾವು ಪಡೆದದ್ದೆಷ್ಟು, ನಮ್ಮ ಬೇರೂರಲು ಬೆಲೆ ತೆತ್ತದ್ದೆಷ್ಟು– ಎಲ್ಲವನ್ನೂ ಪ್ರಾಮಾಣಿಕವಾಗಿಯೂ ರಸವತ್ತಾಗಿಯೂ ತೆರೆದಿಡೋಣ. ಇದಂತೂ ನಮ್ಮದೇ ಚಾವಡಿ. ಇಲ್ಲಿ ನಮ್ಮದೇ ಕಲರವ. ಹರಟೆ, ಪ್ರಬಂಧ, ಕಥೆ, ಕವನ ಯಾವ ಪ್ರಕಾರವಾದರೂ ಸರಿಯೇ, ಬರವಣಿಗೆ ಹರಿದು ಬರಲಿ... ಮನದ ಪಟಲ ತೆರೆದು, ನೆನಪ ಖಜಾನೆ ಕೆದಕಿ, ಸುರುಳಿ ಬಿಡಿಸಿ ನಿನ್ನೆಯನ್ನು ಇಂದಿನ ಅಕ್ಷರವಾಗಿಸೋಣ ಎಂಬುದು ನಮ್ಮ ಆಶಯ.

ಸಮ್ಮೇಳನದಲ್ಲಿ ರಂಗ ಹೊರತರುವ ಪುಸ್ತಕ ಲೋಕಾರ್ಪಣೆಗೊಳ್ಳುವುದಷ್ಟೇ ಅಲ್ಲದೆ ಇಲ್ಲಿನ ನಮ್ಮ ಇತರ ಲೇಖಕರು ಬರೆದ ಪುಸ್ತಕಗಳೂ ಲೋಕಾರ್ಪಣೆಗೊಳ್ಳುತ್ತವೆ. ಕಳೆದ ಸಮ್ಮೇಳನದಿಂದೀಚೆಗೆ ಪ್ರಕಟವಾದ ಪುಸ್ತಕಗಳನ್ನೂ ಮತ್ತು ಅವುಗಳ ಲೇಖಕರನ್ನೂ ಸಭೆಗೆ ಪರಿಚಮಾಡಿಕೊಡುವುದೂ, ಕೃತಿಗಳನ್ನು ವಿಮರ್ಶಿಸುವುದೂ ನಮ್ಮ ಇನ್ನೊಂದು ಕಾರ್ಯಕ್ರಮ. ಜೊತೆಗೆ ಈ ಹೊಸ ಪುಸ್ತಕಗಳನ್ನು ಸಮ್ಮೇಳನದಲ್ಲೇ ಕೊಳ್ಳಲು ಅನುಕೂಲವಾಗುವಂತೆ ಒಂದು ಪುಸ್ತಕ ಸಂತೆಯನ್ನೂ ಏರ್ಪಡಿಸುತ್ತೇವೆ. ತಮ್ಮ ಕೃತಿಗಳಿಗೆ ಇಲ್ಲಿ ಸಿಕ್ಕುವಷ್ಟು ಪುರಸ್ಕಾರ, ಪ್ರಚಾರ ಅಮೆರಿಕದಲ್ಲಿ ಇನ್ನೆಲ್ಲೂ ದೊರೆಯುವುದಿಲ್ಲ ವೆಂದು ಅನೇಕರು ಹೇಳಿದ್ದಾರೆ.

ನಮ್ಮ ಇಲ್ಲಿನ ಲೇಖಕರನ್ನೊಳಗೊಂಡ ಸಾಹಿತ್ಯ ಗೋಷ್ಠಿ, ಮುಖ್ಯ ಅತಿಥಿ ಲೇಖಕರೊಂದಿಗೆ ಸಂವಾದ, ಹಿರಿಯ ಲೇಖಕರ ಸ್ಮರಣೆ (ಜನ್ಮ ಶತಾಬ್ದಿ ಅಥವ ಶ್ರದ್ಧಾಂಜಲಿ) – ಇವು ನಮ್ಮ ಇತರ ಕಾರ್ಯಕ್ರಮಗಳು. ಇಲ್ಲಿ ಕನ್ನಡ ಕಲಿಯುತ್ತಿರುವ ಮಕ್ಕಳಿಗೆ ಪ್ರೋತ್ಸಾಹ ನೀಡಲು, ಮತ್ತು ಆ ಬಗ್ಗೆ ಆಸ್ಥೆ ವಹಿಸಿ ಅತ್ಯಂತ ಶ್ರದ್ಧೆಯಿಂದ ಕೆಲಸಮಾಡುತ್ತಿರುವ ತಂದೆ ತಾಯಿಯರಿಗೆ ನಮ್ಮ ಕೃತಜ್ಞತೆ ತೋರುವ ಕಾರ್ಯಕ್ರಮ ಇನ್ನೊಂದು ಮುಖ್ಯ ಅಂಗ.

ಇವೆಲ್ಲದರ ಜೊತೆಗೆ, ಸಂಜೆ ಒಂದು ಉತ್ತಮ ಮನರಂಜನೆಯ ಕಾರ್ಯಕ್ರಮ ಇರುತ್ತದೆ. ಇಲ್ಲಿಯೂ ನಾವು ಸಾಹಿತ್ಯವನ್ನು, ನಮ್ಮ ಕರ್ನಾಟಕ ಕಲಾಪರಂಪರೆಯನ್ನು ಮರೆಯುವುದಿಲ್ಲ. ಕುವೆಂಪು ರವರ ಬೆರಳ್ಗೆ ಕೊರಳ್, ಪುತಿನ ಅವರ ಹರಿಣಾಭಿಸರಣ, ಅನಕೃ ಅವರ ಹಿರಣ್ಯಕಶಿಪು, ಕೃಷ್ಣಮೂರ್ತಿ ಪುರಾಣಿಕರ ರಾಧೇಯ ಇವೆಲ್ಲ ಇಲ್ಲಿ ಮತ್ತೆ ಬೆಳಕು ಕಂಡಿವೆ. ಯಕ್ಷಗಾನದ ಹಲವಾರು ಪ್ರಸಂಗಗಳು ನಮ್ಮ ರಂಗದ ಮೇಲೆ ಹಾಯ್ದಿವೆ.

ನಮ್ಮ ಇತ್ತೀಚಿನ (೨೦೧೧) ಸಮ್ಮೇಳನ

ಕಾರ್ಯಕ್ರಮ, ಅಲ್ಲದೆ ರಂಗದ ಬಗ್ಗೆ ಮತ್ತಿತರ ವಿವರಗಳನ್ನು ನಮ್ಮ ಅಂತರ್ಜಾಲ ತಾಣ www.kannadasahityaranga.org ನಲ್ಲಿ ನೋಡಬಹುದು.

ಸಮ್ಮೇಳನದಲ್ಲಿ ನಮಗೆ ಸಿಕ್ಕುವ ಕಾಲಾವಕಾಶ ಕಡಿಮೆ. ನಮ್ಮ ಉದ್ದೇಶಗಳಿಗನು ಸಾರವಾಗಿ ವಿವಿಧ ಕಲಾಪಗಳನ್ನು ನಡೆಸಬೇಕಾದ್ದರಿಂದ ಒಟ್ಟಿನಲ್ಲಿ ನಮ್ಮ ಕಾರ್ಯಕ್ರಮಗಳು ದಟ್ಟವಾಗಿರುತ್ತವೆ. ಆದ್ದರಿಂದ ಸಮಯ ಪರಿಪಾಲನೆ ಅತಿ ಮುಖ್ಯ. ಇದನ್ನು ನಾವು ಒಂದು ವ್ರತದಂತೆ ಆಚರಿಸಿಕೊಂಡು ಬಂದಿದ್ದೇವೆ. ಪ್ರತಿಯೊಂದು ಕಾರ್ಯಕ್ರಮವೂ ಪ್ರಕಟಿಸಿದ ವೇಳೆಗೆ ಸರಿಯಾಗಿ ಮೊದಲಾಗಿ ನಿಯಮಿತ ಕಾಲಾವಧಿಯಲ್ಲಿ ಕೊನೆಗೊಳ್ಳುತ್ತದೆ. ಮುಖ್ಯ ಅಥಿಗಳು ಕೂಡ ನಮ್ಮ ಸಮಯಪರಿಪಾಲನೆಗೆ ಹೊರತಲ್ಲ! ಇನ್ನೊಂದು ವಿಚಾರದಲ್ಲೂ ನಾವು ಸ್ವಲ್ಪ ಬೇರೆ: ನಮ್ಮಲ್ಲಿ ಹಾರ ತುರಾಯಿಗಳ ಡೌಲು, ಅಬ್ಬರಗಳಿಲ್ಲ. ಇದು ನಮ್ಮ ಅತಿಥಿಗಳ ಬಗ್ಗೆ ಅಗೌರವವಲ್ಲ. ಕೇವಲ ಔಪಚಾರಿಕತೆಗಿಂತ ವೈಚಾರಿಕತೆಗೆ ಹೆಚ್ಚು ಬೆಲೆ ಸಲ್ಲತಕ್ಕದ್ದು ಎಂಬುದು ನಮ್ಮ ಮೌಲ್ಯ.

ಈ ರೀತಿಯ ಸಮ್ಮೇಳನದ ಕಾರ್ಯ ಮಾತ್ರವಲ್ಲದೆ, ರಂಗ ೨೦೦೬ರಲ್ಲಿ ಒಂದು ಕನ್ನಡ ಸಾಹಿತ್ಯ ಶಿಬಿರ ವನ್ನು ನಡೆಸಿತು. ಇದೊಂದು ವಿಶಿಷ್ಟ, ವಿನೂತನ ಕಾರ್ಯಕ್ರಮ. ಕನ್ನಡ ಸಾಹಿತ್ಯ ಪರಂಪರೆಯನ್ನು ಅಡಕವಾಗಿ ತಿಳಿಸುವ ಎರಡು ದಿನಗಳ ಈ ಶಿಬಿರ ಅಮೆರಿಕದ ಒಂಬತ್ತು ನಗರಗಳಲ್ಲಿ ವಿವಿಧ ವಾರಾಂತ್ಯಗಳಲ್ಲಿ ನಡೆಯಿತು. ಕನ್ನಡದ ಪ್ರಸಿದ್ಧ ಕವಿ, ವಿಮರ್ಶಕ, ಉಪನ್ಯಾಸಕಾರ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಇದನ್ನು ಬಹು ಯಶಸ್ವಿಯಾಗಿ ನಡೆಸಿಕೊಟ್ಟರು. ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಲಿಖಿತ ಟಿಪ್ಪಣಿಗಳು ಮಾತ್ರವಲ್ಲದೆ, ನಾಲ್ಕು ಧ್ವನಿಮುದ್ರಿಕೆಗಳನ್ನೊಳಗೊಂಡ ಒಂದು CD ಸಂಪುಟವನ್ನೂ ಸಿದ್ಧಪಡಿಸಿಕೊಟ್ಟರು. (ಇಂಥ CD ಕನ್ನಡದಲ್ಲಿ ಇದೇ ಮೊದಲು ಬಂದದ್ದು ಎಂದು ಕೇಳಿದ್ದೇನೆ.) ಒಟ್ಟು ೨೦೦ಕ್ಕೂ ಮೇಲ್ಪಟ್ಟು ಕನ್ನಡಿಗರು ಈ ಶಿಬಿರದಲ್ಲಿ ಪಾಲುಗೊಂಡರು. ಸಾನ್ ಫ್ರಾನ್ಸಿಸ್ಕೋನಲ್ಲಿ ನಡೆದ ಶಿಬಿರ ಒಂದರಲ್ಲೇ ೬೩ ಜನ ಭಾಗವಹಿಸಿದ್ದರು. ಇಂಥ ಶಿಬಿರಗಳನ್ನು ಮತ್ತೆ ಮತ್ತೆ ನಡೆಸಬೇಕೆಂಬ ಕೋರಿಕೆಗಳು ಬರುತ್ತಲೇ ಇವೆ.

ಇಂತು ನಮ್ಮ ರಂಗದ ಕಾರ್ಯಕಲಾಪಗಳು. ಇದನ್ನೆಲ್ಲ ನಿರ್ವಹಿಸಲು ಸಮಯ ಬೇಕು, ಶ್ರದ್ಧೆ ಬೇಕು. ಅಮೆರಿಕ ಎಷ್ಟು ಶ್ರೀಮಂತ ದೇಶ ಎನ್ನಿಸಿಕೊಂಡರೂ ಒಂದು ವಿಚಾರದಲ್ಲಿ ಅದು ಬಡ ದೇಶ. ಯಾರಿಗೂ ಇಲ್ಲಿ ಬಿಡುವೆ ಇಲ್ಲ! ನಮ್ಮ ರಂಗದ ಕಾರ್ಯನಿರ್ವಾಹಕ ಜವಾಬ್ದಾರಿಯನ್ನು ಹೊತ್ತವರು (ಕಾರ್ಯಕಾರೀ ಸಮಿತಿಯ ಅಧ್ಯಕ್ಷ ಡಾ. ಎಂ.ಎಸ್. ನಟರಾಜ ಮತ್ತು ಇತರರು) ನಿಜವಾಗಿ ಕ್ರಿಯಾಶೀಲರು. ರಂಗದ ಮೇಲ್ಮೆಗಾಗಿ ತುಂಬ ಶ್ರದ್ಧೆಯಿಂದ ದುಡಿಯುತ್ತಿರುವವರು. ಮುಖ್ಯವಾಗಿ ಎಲ್ಲರಲ್ಲೂ ಮನೆಮಾಡಿರುವ ಭಾವನೆ ಇದು ಕನ್ನಡದ ಕೆಲಸ, ಅದನ್ನು ಮಾಡುವಲ್ಲಿ ನಾವು ನಮ್ಮನ್ನು ಮೀರಿ ಕೆಲಸಮಾಡಬೇಕು ಎಂಬ ಶ್ರದ್ಧೆ. ಈ ಕೆಲಸದಲ್ಲಿ ನಮಗೆ ಇಲ್ಲಿನ ಕನ್ನಡಿಗರು ಇದುವರೆಗೆ ತುಂಬಾ ಪ್ರೋತ್ಸಾಹವಿತ್ತಿದ್ದಾರೆ. ವೈಯುಕ್ತಿಕವಾಗಿ ಅನೇಕ ದಾನಿಗಳು ಧನಸಹಾಯವಿತ್ತಿದ್ದಾರೆ. ಅವರೆಲ್ಲರ ಬೆಂಬಲ, ಸಹಕಾರ, ಪ್ರೋತ್ಸಾಹ ಇಲ್ಲದೆ ನಾವು ಇಂಥ ಕೆಲಸ ಮುಂದುವರೆಸುವುದು ಕಷ್ಟ.

ಮುಂಬಯಿಯ ಮೈಸೂರ್ ಅಸೋಸಿಯೇಷನ್ ತುಂಬಾ ಹಿರಿಯ ಸಂಸ್ಥೆ. ನಾವು ಇನ್ನೂ ಈಗಲೀಗ ಕಾಲಿಡುತ್ತಿರುವವರು. ಆದರೆ ನಮ್ಮ ಧ್ಯೇಯಗಳು, ನಮ್ಮ ಕಾರ್ಯಾಚರಣೆ, ನಮ್ಮ ನಡೆ ಸರಿಯಾದ ದಿಕ್ಕಿನಲ್ಲಿದೆ ಎಂದು ನಂಬಿದ್ದೇವೆ. ನಮ್ಮ ಪುಸ್ತಕ ಆಚೀಚೆಯ ಕತೆಗಳು ಪ್ರಕಟನೆಗೆ ಸಿದ್ಧವಾಗುತ್ತಿದ್ದಾಗ ಅದಕ್ಕೆ ಬೆನ್ನುಡಿ ಬರೆದ ಯಶವಂತ ಚಿತ್ತಾಲರು ಒಂದು ಮಾತು ಹೇಳಿದ್ದರು: ಕರ್ನಾಟಕದ ಹೊರಗಿರುವ ನಾನೂ ಒಂದು ರೀತಿಯಲ್ಲಿ ಅನಿವಾಸಿಯೇ. ನಿಮ್ಮ ಅನುಭವ ನನಗೂ ಇದೆ, ನಿಮ್ಮ ಅನಿಸಿಕೆಗಳಿಗೆ ಸ್ಪಂದಿಸಬಲ್ಲೆ, ಎಂದು. ಆ ಮಾತು ಎಷ್ಟು ನಿಜ ಎಂಬುದು ನಮ್ಮ–ನಿಮ್ಮಲ್ಲೆರ ಅನುಭವಕ್ಕೂ ಬಂದಿರುವುದೇ.

ನೇಸರಿ ನ ಬೆಳಕು ನಮ್ಮ ರಂಗದ ಮೇಲೆ ಬೀಳಲು ಅವಕಾಶ ಕಲ್ಪಿಸಿಕೊಟ್ಟ ಡಾ. ಗಿರಿಜಾ ಶಾಸ್ತ್ರಿಯವರಿಗೆ ನಮ್ಮ ಧನ್ಯವಾದಗಳು. ಹೊರನಾಡಿನಲ್ಲಿ ಕನ್ನಡತನವನ್ನು ಉಳಿಸುವ ಪ್ರಯತ್ನವನ್ನು ನೀವು ಎಂದಿನಿಂದಲೋ ಮಾಡುತ್ತಿದ್ದೀರಿ. ಅದೇ ಕಾರ್ಯದ ಇನ್ನೊಂದು ಆಯಾಮದಲ್ಲಿ ತೊಡಗಿರುವ ನಮ್ಮ ರಂಗದ ಮೇಲೆ ನಿಮ್ಮೆಲ್ಲರ ಪ್ರೀತಿ ಎಂದಿಗೂ ಇರಲಿ ಎಂದು ಬಯಸುತ್ತೇನೆ.

ಇತಿ,
ನಮಸ್ಕಾರಗಳು,
ಎಚ್.ವೈ. ರಾಜಗೋಪಾಲ್
ಅಧ್ಯಕ್ಷ, ಕಸಾರಂ ಆಡಳಿತ ಮಂಡಲಿ
hyrajagopal@gmail.com

# MATRIMONIAL

Wanted alliance for a boy –born & brought up in Mumbai – DOB-07/09/1980 – M.Com, M.B.A. – Height 6'1" – Kashyapa Gotra – Aslesha Nakshatra – working for an Asset Management Co., Expectations – Any Brahmin Girl, Educated, Working Or Non-working no bar. Please contact:

Smt. Geetha Kashyap -9689910862 / 9820058618

***

Wanted alliance for a boy – age 27 yrs. – height 5'2" – working in a Bank-Graduate from Mumbai University – Kashyap Gotra, Swati Nakshatra . Girl from any Kannada speaking Brahmin family preferably working.

Contact : Mr. Krishnamurthy N.K. – 9167378206 / 9920042174

***

Alliance invited for a girl, DOB: 20-07-1987, Height 5ft 1" Koundanya Gotra, Qualification: M.Pharma , Age preference 28 to 30 yrs, Kannada Speaking Madhwa Boys from Bangalore / Mysore settled in Mumbai preferred. Good Job with Salary more than Rs. 40000/- pm preferred.

Contact: Mr. Prasad R.Rao – 9833075899 / 9969038734

***

Alliance invited for a boy, DOB: 12/12/1977, B.com, working as a Asst Manager in a reputed company. Girl from any Kannada speaking Brahmin family preferably working.

Contact: Guruprasad S. Rao – 9819822172

***

Alliance invited for a boy, DOB: 22.06.1983, Height 6ft, Pendlkula Gotra, Vishkha Nakshatra, Qualification:B.Sc., MBA. Preference Age 21-26 yrs, Height 5'-4" to 5'-8". Complexion –fair. Graduate working cast no bar (T-1904426 Bharat Matrimonial)


Contact: Mr. M.K.M. Chetty – 9987479503 / 25655375

# ಷಾಜಹಾನ್‌ರ ಬುರ್ಖಾದೊಳಗಿನ ಪ್ರತಿರೋಧ 'ನಖಾಬ್'ನ ಕನ್ನಡದ ಅನುವಾದ

ಜಾಗತಿಕ ಸಾಹಿತ್ಯದಲ್ಲಿ ಧಾರ್ಮಿಕ ಪಠ್ಯಗಳು ಅತಿ ಹೆಚ್ಚು ಅನುವಾದವಾಗಿವೆ. ನಂತರದಲ್ಲಿ ಶೇಕ್ಸ್‌ಪಿಯರ್ ನ ನಾಟಕಗಳು ನಿಲ್ಲುತ್ತವೆ. ಆ ನಂತರದ ಸಾಲಿನಲ್ಲಿ ಧಾರ್ಮಿಕ ಪ್ರತಿವಾದಿಯಾದ ಉಮರ್ ಖಯ್ಯಾಮ್ ನ ರುಬಾಯತ್ ಗಳೂ ಅನುವಾದವಾಗಿರುವುದು ಅದರ ಜನಪ್ರಿಯತೆಯ ಸೂಚಕವಾಗಿದೆ. ಸಮುದಾಯವೊಂದರ ಒಳಗಿನ ವ್ಯಕ್ತಿಯಾಗಿ ತನ್ನ ಸಮುದಾಯದ ನಂಬಿಕೆ ಆಚಾರ ವಿಚಾರಗಳ ಇತಿಮಿತಿಯನ್ನು ಅರಿತು ಅದನ್ನು ಮುರಿಯಲು ಅಥವಾ ಅದರಾಚೆಗೆ ವಿಸ್ತರಿಸಲು ಉಮರ್ ಖಯ್ಯಾಮ್ ಪ್ರಯತ್ನಪಟ್ಟಿದ್ದಾನೆ. ಹಾಗಾಗಿ ಆತ ತನ್ನ ಜೀವಿತ ಕಾಲದಲ್ಲಿ ಕವಿಯಾಗಿ ಮಾನ್ಯತೆ ಪಡೆಯದಿದ್ದರೂ ಆತನ ನಿಲುವು ಮಾನವ ಜೀವಿತದ ಚಿಂತನೆತ ಭಾಗವಾಗಲು ಸಾಧ್ಯವಾಗಿದೆ. ಬೌದ್ಧಿಕ ಜಗತ್ತಿನ ಇತಿಹಾಸದಲ್ಲಿ ಇಂಥವರು ತಮ್ಮ ಜೀವಿತದ ಕಾಲಾವಧಿಯಲ್ಲಿ ಜ್ಞಾನದ ಸೀಮೋಲ್ಲಂಘನೆ ಮಾಡಲು ಹೆಣಗಿದ ಸಾಹಸಿಗರಾಗಿ ಪ್ರತ್ಯೇಕವಾಗಿ ನಿಲ್ಲುತ್ತಾರೆ.

ಧಾರ್ಮಿಕ ಪ್ರತಿವಾದಿಗಳಂತೆ ಕಾಣುವ ಸಲ್ಮಾನ್ ರಶ್ದೀ ಅವರ ಸೆಟಾನಿಕ್ ವರ್ಸಸ್ ಆಗಲೀ ತಸ್ಲಿಮಾ ನಸ್ರೀನ್ ಅವರ ಲಜ್ಜಾ ಆಗಲೀ ಹೆಚ್ಚು ಜನರ ಗಮನ ಸೆಳೆದದ್ದು ಇವು ಹೊಂದಿರುವ ಧಾರ್ಮಿಕ ನೆಲೆಯನ್ನು ಕಡೆಗಣಿಸಬೇಕಾದ ಆಶಯ ಕುರಿತು ಪುರೋಹಿತ ವರ್ಗದಿಂದ ಉಂಟಾದ ಪ್ರತಿಭಟನೆಯಿಂದಾಗಿ. ಕನ್ನಡದಲ್ಲಿ ಸಂಸ್ಕಾರ, ಘಟಶ್ರಾದ್ಧ ಮೊದಲಾದ ಕಥನ ಕ್ರಮದ ಮೂಲಕ ಈ ಸಾಲಿನಲ್ಲಿ ಅನಂತಮೂರ್ತಿ ಗುರುತಿಸಿ ಕೊಂಡರೂ ಅವರು ಧಾರ್ಮಿಕ ಪ್ರತಿವಾದಿಯೇನಲ್ಲ. ಭಾರತದ ಸಂತ ಪರಂಪರೆಯನ್ನು ಇದೇ ಸಾಲಿನಲ್ಲಿಟ್ಟು ನೋಡಬಹುದು. ಆದರೆ ಅವರ ಕೊಡುಗೆ ಬೌದ್ಧಿಕ ಸಾಹಸಕ್ಕಿಂತ ಧರ್ಮದ ಅಧಿಕಾರಿಶಾಹಿ ನೆಲೆಯನ್ನು ಕಡೆಗಣಿಸಿ ಕಂಡಿತು. ಭಕ್ತಿ ಕಲ್ಪನೆಯ ಮೂಲಕ ಸಾಮರಸ್ಯದ ಕಡೆಗೆ ಗಮನ ಕೇಂದ್ರೀಕರಿಸಿತು. ಅಲ್ಲದೆ ಅದರ ಕ್ರಾಂತಿಕಾರಿ ಸಾಮಾಜಿಕ ಆಶಯಗಳು ಧಾರ್ಮಿಕ ಅಧೀನತೆ ಯಲ್ಲಿಯೇ ಮೂಡಿತು. ಆದ್ದರಿಂದ ಜ್ಞಾನದ ನಿರಂಕುಶತ್ವ ಸಾಧಿಸಲಾಗದೆ ಧರ್ಮ ರಾಜಕಾರಣದ ಭಾಗವಾಯಿತು. ಸಾಧಿತವಾದ ಅಷ್ಟಿಷ್ಟು ಬೌದ್ಧಿಕ ಸಾಧನೆಯೂ ಇದರಿಂದ ಮಸುಕಾಯಿತು.

ಇಲ್ಲಿ ನಾನು ಹೇಳುತ್ತಿರುವುದು ಸಮುದಾಯ ವೊಂದಕ್ಕೆ ಸೇರಿದ ಲೇಖಕ ತನ್ನ ಸಮುದಾಯದ ಆಲೋಚನಾ ಮತ್ತು ಭಾವನಾ ಸ್ಥರಗಳನ್ನು ಪರಿಷ್ಕರಿಸುವ ಕಾರ್ಯವೆ ಸಮುದಾಯ ಮಟ್ಟದಲ್ಲಿ




ಸವಾಲಿನದೂ ವ್ಯಕ್ತಿ ಮಟ್ಟದಲ್ಲಿ ತನ್ನನ್ನೇ ತಾನು ತಿದ್ದಿಕೊಂಡು ಹೊಸ ಮನುಷ್ಯನಾಗುವ ಬಗೆಯದೂ ಆಗಿರುತ್ತದೆ ಎಂದು. ಬಹು ಸಮುದಾಯಗಳ ಸಮಾಜವಿರುವ ಭಾರತದಲ್ಲಿ ಸಮುದಾಯದೊಳಗಿನ ಈ ಬೆಳವಣಿಗೆ ಆ ಸಮುದಾಯದ ಆಲೋಚನೆಯ ಮಂತು ಕಡೆದು ಮತ್ತಷ್ಟು ವಿವೇಕವನ್ನು ಹೆಚ್ಚಿಸುತ್ತದೆ.

ಡಿವಿಜಿ ಉಮರನನ್ನು ಕನ್ನಡಕ್ಕೆ ತಂದಾಗ ಜೀವನವನ್ನು ಧಾರ್ಮಿಕ ನಂಬಿಕೆಯ ಚೌಕಟ್ಟಿನಾಚೆ ನಿಂತು ಶುದ್ಧ ಸಾಮಾಜಿಕ ನೆಲೆಯ ವಾಸ್ತವಿಕ ದೃಷ್ಟಿಕೋನದಿಂದ ನೋಡಲು ಉದ್ದೀಪಿಸಿತು. ಅಲ್ಲದೆ ಪಾರಂಪರಿಕ ಮೌಲ್ಯಗಳ ಪ್ರತಿಪಾದಕರಂತೆ

**✍ ಶ್ರೀಧರ ಪಿಸ್ಸೆ, ಹಂಪಿ**

ಕಾಣುವ ಸ್ವತಹ ಡಿವಿಜಿಯವನ್ನೆ ಮಂಕುತಿಮ್ಮನ ಕಗ್ಗದೆಡೆಗೆ ಸೆಳೆಯಿತು. 'ಬದುಕು ಜಟಕಾ ಬಂಡಿ ವಿಧಿಯದರ ಸಾಹೇಬ' ಎಂದು ಉದ್ಗಾರ ತೆಗೆಯುವಂತೆ ಮಾಡಿ ಪಾರಂಪರಿಕ ಜೀವನ ಮೌಲ್ಯ ಕಲ್ಪನೆಯೊಂದಿಗೆ ನಿರೀಶ್ವರವಾದಿ ತಾತ್ವಿಕತೆಯನ್ನು ಬೆರೆಸುವಂತೆ ಮಾಡಿತು. ಅಂದರೆ ಹೊರ ಸಮು ದಾಯವೊಂದರ ಆಲೋಚನಾ ಕ್ರಮದೊಂದಿಗೆ ನಡೆಸಿದ ಮುಖಾಮುಖಿಯಿಂದಾಗಿ ತನ್ನ ಸಮುದಾಯದ ಚಿಂತನಾಕ್ರಮದಲ್ಲಿ ಬೆಳವಣಿಗೆ ತರಲು ಸಾಧ್ಯವಾಯಿತು. ಭಿನ್ನ ಸಮುದಾಯಗಳ ನಡುವಿನ ಅಸ್ತಿತ್ವದ ಪ್ರಶ್ನೆಯಾಗಲೀ ರಾಜಕಾರಣದ ಪ್ರಶ್ನೆಯಾಗಲೀ ಅಡ್ಡಗೋಡೆಯಾಗಿ ಮುಂದುಮಾಡಿಕೊಳ್ಳದೆ ಒಟ್ಟಾರೆಯಾಗಿ ಮಾನವನ ಮನಸ್ಸು ಅರಳಿಸುವ ಕ್ರಮದಲ್ಲಿ ಸಾಗಿದ ಕಾರ್ಯವಿಧಾನವಿದು.

ಆದರೆ ಒಂದು ಸಮುದಾಯದ ಅರೆಕೊರೆಗಳನ್ನು ಕುರಿತು ಮತ್ತೊಂದು ಸಮುದಾಯದ ಲೇಖಕ ದನಿಯೆತ್ತಿದರೆ ಅಲ್ಲಿ ಅನಗತ್ಯ ಸ್ವಸಮರ್ಥನೆ ಮತ್ತು ಪರರ ಖಂಡನೆ ವಸ್ತುವೂ ವಿಧಾನವೂ ಆಶಯವೂ ಆಗಿ ಕಾರ್ಯನಿರ್ವಹಿಸುತ್ತದೆ. ಕ್ರಮೇಣ ಅದು ಭೌತಿಕ ಸಂಘರ್ಷಕ್ಕೂ ಮೂಲವಾಗಬಹುದು. ಇಂಥದ್ದೊಂದು ಎಳೆಯೂ ಪ್ರಸ್ತುತ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ 'ಪ್ರತಿ ಸಂಸ್ಕೃತಿ' ಚಿಂತನಾ ಕ್ರಮದಲ್ಲಿ ಅಪ್ರಧಾನವಾಗಿ ಕಾರ್ಯಪ್ರವೃತ್ತವಾಗಿದೆ. ಈಗ ಆಂಧ್ರದ ಮುಸ್ಲಿಂ ಮಹಿಳೆ ಷಾಜಹಾನ್ ತೆಲುಗಿನಲ್ಲಿ ಪ್ರಕಟಿಸಿದ ಕವನ ಸಂಕಲನದ ಕನ್ನಡ ಅನುವಾದವನ್ನು ಗೆಳೆಯ ಸ. ರಘುನಾಥ ಹೊರತಂದಿದ್ದಾರೆ. 'ಉಮರನ ಒಸಗೆ'ಯಂತೆ ಇಲ್ಲಿಯೂ ಲೇಖಕ ಮತ್ತು ಅನುವಾದಕ ಭಿನ್ನ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಈ ಇಬ್ಬರ ವಸ್ತು ಆಶಯ ವಿಧಾನಗಳು ಹೇಗೆ ಕೆಲಸ ಮಾಡಿವೆ ಎಂಬುದು ಕುತೂಹಲಕಾರಿ.

ವಿಶ್ವದ ಪ್ರಮುಖ ಧರ್ಮಗಳಲ್ಲಿ ಇಸ್ಲಾಂ ಧರ್ಮ ಮಾತ್ರ ಹೆಣ್ಣಿನ ಮೇಲೆ ಹೆಚ್ಚು ನಿರ್ಬಂಧಗಳನ್ನು ಹೇರದೆ ಅವಳಿಗೆ ಸ್ವಾತಂತ್ರ್ಯವನ್ನು ನೀಡಿ ಉದಾರವಾಗಿ ನಡೆದುಕೊಂಡಿದೆ ಎಂದು ಹೇಳಲಾಗುತ್ತದೆ. ಇಂಥ ಅಭಿಪ್ರಾಯಗಳ ವಿರುದ್ಧ ಸೆಡ್ಡು ಹೊಡೆದು ನಿಂತಿರುವ ಷಾಹಜಾನ್ ಹೇಳುತ್ತಾಳೆ.

ಹುಟ್ಟಿದಂದಿನಿಂದ ಚಾಂದನಿಯ ರುಚಿಯರಿಯದೆ
ಮಳೆಯ ರುಚಿ ತಿಳಿಯದೆ
ವಸಂತದ ರುಚಿಯನ್ನೂ ನೋಡದೆ ಬೆಳೆದು
ನಿರ್ಬಂಧಗಳ ಸರಹದ್ದುಗಳಲ್ಲಿ ಗುಮಾಮಳಾಗಿ
ಬೆಳೆದ ಹೆಣ್ಣು (ಪರದೆ ಸರಿಸಿ ನೋಡು)

ಮುಸ್ಲಿಂ ಮಹಿಳೆ ಹಲವು ನಿರ್ಬಂಧಗಳ ನಡುವೆ ಬಂಧಿಯಾಗಿದ್ದಾಳೆ. ಆಕೆ ಸ್ವಂತಿಕೆಯೇ ಇಲ್ಲದ ಗುಲಾಮಳು. ಮಾನವ ಪ್ರಕೃತಿಯ ಮಗುವಾಗಿದ್ದರೂ ಆಕೆ ನಿಸರ್ಗದೊಂದಿಗೆ ಸಂಪರ್ಕ ಪಡೆದಿಲ್ಲ. ಹಾಗಾಗಿ ಅನ್ಯಳಾಗಿ ಅನಾಥಳಾಗಿ ಬೆಳೆದಿದ್ದಾಳೆ. ಪ್ರಕೃತಿಯಲ್ಲಿ ಬದಲಾವಣೆಗಳು ಮಾನವನಲ್ಲಿ ಉಂಟು ಮಾಡುವ ಅಚ್ಚರಿ, ವಿಸ್ಮಯ, ಬೆರಗುಗಳ ಸಂಸರ್ಗದಿಂದ ದೂರವಾಗಿ ನಲಿವು ಕಾಣದ ಸೆರೆಯಲ್ಲಿ ಉಳಿದಿದ್ದಾಳೆ.

ಜೀವನ ಸಂಗಾತಿಯಾಗಿ ಅರ್ಧಾಂಗಿಯಾದ ಗಂಡಸು ಆಕೆಯ ಮೋಹದಲ್ಲಿ ತನ್ನನ್ನೆ ಮರೆತುಬಿಟ್ಟಿದ್ದಾನೆ. ತನ್ನ ಹಿತಾಸಕ್ತಿಯಲ್ಲಿ ಮುಳುಗಿಹೋಗಿದ್ದಾನೆ. ಅವನಿಗೆ ಹೆಣ್ಣಿನ ಮನದಾಳದಲ್ಲಿ ಮಡುಗಟ್ಟಿರುವ ದುಃಖದ ಸೆಲೆಯನ್ನು ಅರಿಯುವ ನಿವಾರಿಸುವ ಕಣ್ಣಿಲ್ಲ. ಇಂಥ ಇಂಗಿತವನ್ನು ಹೇಳುವ ಈ ಕ್ರಮದಲ್ಲಿ ಹೊಸತನವಿದೆ.

ಕಾಡಿಗೆ ಕಣ್ಣಿನಮಲಿನಲ್ಲಿ ತಣಿವ ಒಬ್ಬನೂ
ಕಾಡಿಗೆಯ ಮರೆಯ ಕಣ್ಣೀರ ಸ್ಪರ್ಶಿಸುವುದಿಲ್ಲ
(ಅನಾರ್ಕಲಿ)

ಸಹಜೀವಿಯಾದ ಗಂಡಸು ಆಕೆಯನ್ನು ಕಡೆಗಣಿಸಿ ನೋಡುತ್ತಿರುವ ಸಮಸ್ಯೆ ಇಂದಿನ ಹೊಸ ತಲೆಮಾರಿಗೆ ಸೀಮಿತವಲ್ಲ. ಅದು ತನಗಿಂತ ಹಿಂದಿನ ಮತ್ತು ತಲೆಮಾರಿನಿಂದ ಬಳುವಳಿ ಬಂದದ್ದು ಎಂಬುದನ್ನು ಈ ಕೆಳಗಿನ ಸಾಲುಗಳು ಹೇಳುತ್ತಿವೆ.

ದಾರಿದ್ರ್ಯದ ಮಕಮಲ್ಲಿನಲ್ಲಿ ಸುತ್ತಿ ನಿನ್ನ ನವಾಬ
ಇನಾಮು ಕೊಡುತ್ತಿರುವನಲ್ಲಮ್ಮ
ಅಬ್ಬಜಾನನ ಬಡೀ ಬೀವಿಯಾಗಿ
ಬದುಕಿನ ಅಲ್ಬಮ್ಮಿಬ್ಬಿನಲ್ಲಿಟ್ಟ ನಿನ್ನ
ಭಗ್ನ ಚಿತ್ರವನ್ನು ನೋಡುತ್ತ
ಅವನ ಚಟಗಳ ಆಸಿಡ್ಡಿನಲ್ಲಿ ಅದ್ದಿ ಎತ್ತಿದ
ಅಸ್ಥಿ ಪಂಜರದಂತೆ
ಕಣ್ಣ ಜಲಾಶಯಗಳಲ್ಲಿ ತೇಲಾಡುವ
ಮೂಳೆಗಳ ನಿನ್ನ ರೂಪ ( ಭಾವಚಿತ್ರ)

ಯಾರಿಗೆ ಆಗಲೀ ತಾಯಿ ಎಂಬುದು ಅಭಿಮಾನದ ವಸ್ತು. ಅಂಥ ತಾಯಿ ಜೀವ ಕೂಡ ತಂದೆ / ಗಂಡಸಿನ ಹಲವು ಹೆಂಗಸರಲ್ಲಿ ಒಬ್ಬಳಾಗಿದ್ದಾಳೆ. ಅವನ ಮೂಗಿನ ನೇರದಲ್ಲಿ ಜೀವನ ರೂಪಿಸಿಕೊಂಡು ಜೀವಚ್ಛದಂತಾಗಿದ್ದಾಳೆ. ಹಿಂದಿನ ಈ ಜೀವನ ಕ್ರಮ ನಿದರ್ಶನಗಳು ಮುಂದಿನ ಜನತೆಯ ಜೀವನ ಕ್ರಮವನ್ನು ನಿರ್ಧರಿಸುತ್ತದೆ. ಅಂದರೆ ಹೊಸ ಪೀಳಿಗೆಯ ಯುವತಿಯರು ಪುರುಷ ಅಧೀನತೆ ಮೀರಬಾರದೆಂದು ಇದುವರೆಗೂ ನಡೆದು ಬಂದ ಸಂಪ್ರದಾಯ ಸೂಚಿಸುತ್ತದೆ. ಇದರಿಂದ ಆಧುನಿಕ ಮಹಿಳೆಯರ ಉಸಿರು ಕಟ್ಟುತ್ತಿದೆ.

ಅನಾಚೂನವಾಗಿ ನಡೆಸಿಕೊಂಡು ಬಂದಿರುವ ಹೆಣ್ಣಿನ ಕತ್ತು ಹಿಸುಕಿದಂಥ ಈ ಸಂಪ್ರದಾಯ, ಪದ್ಧತಿಗಳನ್ನು ಹೀಗೆಯೇ ಮುನ್ನಡೆಸಬೇಕೆಂಬ ಸಮುದಾಯದ ಇಂಗಿತವೇ ಮಾನವ ಜೀವಿಯ ಅಜನ್ಮವಾದ ಹಕ್ಕು ಮತ್ತು ಸ್ವಾತಂತ್ರ್ಯದ ಬಗ್ಗೆ ಚಿಂತಿಸುವಂತೆ ಮಾಡುತ್ತದೆ. ಸಂಪ್ರದಾಯದ ಇತಿಮಿತಿಗಳು ಅರಿವಿಗೆ ಬರುತ್ತದೆ.

ನನ್ನನ್ನು ಕೊಂದು ಮೂಕಿಯಂತೆ ಉಳಿಸಬೇಕೆಂಬ
ಎಲ್ಲರ ಹುನ್ನಾರಿಗೆ ಬಿದ್ದು ಬಿದ್ದು ನಗುತ್ತಿರುವೆ
(ದಡ್ಡಿ)

ಮನುಷ್ಯ ನಿರ್ಮಿತ ಕಟ್ಟುಪಾಡುಗಳು ಮನುಷ್ಯನನ್ನೆ ಕಟ್ಟಿಹಾಕಬಲ್ಲವು; ಜೀವ ವಿರೋಧಿಯಾಗಿ ಪರಿಣಮಿಸಬಲ್ಲವು. ಈ ಎಲ್ಲ ಕಟ್ಟುಪಾಡುಗಳು ಮಾನವ ಜಾರಿಗೆ ತಂದ ಕಲ್ಪನಾ ಮೌಲ್ಯಗಳಷ್ಟೇ ಎಂಬ ಅರಿವು ಕವಯತ್ರಿಯದು. ಹಾಗಾಗಿಯೆ ಸಂಪ್ರದಾಯದ ಬಿಗಿ ನಿಲುವು ನಗೆಪಾಟಲಿನದಾಗಿ ಕಂಡಿದೆ. ಮತ ಧರ್ಮಗಳ ಸೀಮೆ ಸೀಳಿ ಹೊರ ಬಂದಿರುವ ಕವಯತ್ರಿಯ ಶುದ್ಧ ಮಾನವ ಪ್ರೀತಿಗೆ ಸಮುದಾಯದಲ್ಲಿ ಬೆಂಬಲದ ಬಲವಿಲ್ಲ. ಈ ಅನುಭವವನ್ನು ಸಿರಿತನ–ಬಡತನ, ದರ್ಪ–ಅಸಹಾಯಕತೆ, ಅಟ್ಟಹಾಸ–ಪೆಚ್ಚುಮುಖಗಳ ವೈರುಧ್ಯದ ಚಿತ್ರದ ಮೂಲಕ ಕಟ್ಟಿಕೊಡಲಾಗಿದೆ.

ಅವರ ಉರ್ದು ಜರಿ ಸಮೂಹಗಳ ಫಳಫಳ
ಮಿಂಚುಗಳ ಮುಂದೆ
ನನ್ನ ಧ್ವನಿ ಕಾಟನ್ ಸೀರೆಯಾಗಿ ಪೆಚ್ಚುಪೆಚ್ಚಾಗಿ
(ಲದ್ದಾಫ಼ಿ)

ಜೀವ ಪ್ರೀತಿ ಪರವಾದ ದನಿ ಅಸಹಾಯವಾಗಿದ್ದರೂ ಧೃತಿಗೆಟ್ಟ ಸ್ಥಿತಿಯಲ್ಲಿಲ್ಲ. ಹಾಗಾಗಿ ಪುರೋಹಿತಶಾಹಿ ಮತ್ತು ಪುರುಷಶಾಹಿ ಕುರಿತ ಭಿನ್ನಾಭಿಪ್ರಾಯ ಅಸಹನೆಯಾಗಿ ಗಟ್ಟಿಗೊಳ್ಳುತ್ತದೆ.

ಪೊದೆ ಗಡ್ಡಗಳು, ಬಿಳಿ ಟೋಪಿಗಳು
ಪೈಜಾಮ ಕುರ್ತಾಗಳು, ಐದು ಬಾರಿ ನಮಾಜು
ಅಯ್ಯಾ, ನೀವೆಲ್ಲ ಪವಿತ್ರ ಮೂರ್ತಿಗಳು
ಪವಿತ್ರ ಆಚಾರಗಳನ್ನು ಕಾಪಾಡುವ ದರ್ವಾಜಗಳು
ಇಷ್ಟವಿರದಿದ್ದರೂ ನಿನ್ನೊಡಗೂಡಿ ಸಂಸಾರ ಹೂಡಿದ್ದಕ್ಕೆ
ಕಾಲು ಹಿಡಿದ ಈ ಕೈಗಳೇ
ಹೌದು ಈ ಕೈಗಳೇ
ಮುಷ್ಟಿ ಬಿಗಿಯುತ್ತಿವೆ! (ಖಬರ್ದಾರ್)

ಸಂಪ್ರದಾಯದ ಕಟ್ಟುಗಳು ಬಿಗಿಗೊಂಡಂತೆಲ್ಲ ಅಸಹನೆ ಪ್ರತಿರೋಧವಾಗಿ ಮಾರ್ಪಾಟು ಹೊಂದುತ್ತದೆ. ಅದು ಪುರೋಹಿತಶಾಹಿ ಮತ್ತು ಪುರುಷಶಾಹಿಯ ಕೈಯಲ್ಲಿ ಅನುಭವಿಸಿದ ಕ್ರೂರ ದೌರ್ಜನ್ಯದಲ್ಲಿ ನಲುಗಿದ ನೋವಿನ ನೆನಪುಗಳನ್ನು ದಟ್ಟಗೊಳಿಸುತ್ತದೆ.

ನೋವುಗಟ್ಟಿದ ಬಾಸುಂಡೆಗಳು
ಬಿಕ್ಕುವ ಕೊರಳೂ . . . ಖಿಜಾ
ಅಮ್ಮೀ ಪುಟ್ಟು (ತಿಂಡಿ) ನಕ್ಕೋ ಅಮ್ಮೀ
ಅಮ್ಮೀ ಪುಟ್ಟು ನಕ್ಕೋ ಅಮ್ಮೀ (ಪುಟ್ಟು)

ಮುಗ್ಧ ಮಗುವಿನ ಸಹಜವಾದ ಸಣ್ಣ ಪುಟ್ಟ ಬಾಯಿರುಚಿಯ ಆಸೆಗಳನ್ನು ಪೂರೈಸಿ ಈಡರಿಸಲಾಗದಂಥ ತನ್ನ ಆರ್ಥಿಕ ಅಸಹಾಯಕತೆಯನ್ನು ಮರೆಮಾಚಿರುವ ಅಧಿಕಾರಿಶಾಹಿ ತನ್ನ ದಮನಕಾರಿ ನೀತಿಯಿಂದ ಅದನ್ನು ಮಣಿಸುತ್ತದೆ, ದಾನವನಾಗಿ ಮರುಹುಟ್ಟು ಪಡೆಯುತ್ತದೆ.

ದಮನಿತ ಸ್ಥಿತಿಯಲ್ಲಿರುವ ಮಾವ ಜೀವಿಗಳು ಘನತೆಯನ್ನು ಕಳೆದುಕೊಂಡು ಬಿಡುತ್ತಾರೆ. ಅವರು ಮತ್ತೊಬ್ಬರ ಹಂಗಿನಲ್ಲಿ, ಆ ಮತ್ತೊಬ್ಬರ ಗುರಿ, ಉದ್ದೇಶಗಳನ್ನು ಸಾಧಿಸುತ್ತ ಅವರಿಗೆ ಬಲಿಯಾಗುವಂಥ ಸ್ವಾತಂತ್ರ್ಯಹೀನ ಪಶು ಪಕ್ಷಿಗಳಂತೆ ಸ್ವಂತದ ಆಲೋಚನಾ ಬಲವಿಲ್ಲದ ಕುರುಡರಾಗುತ್ತಾರೆ.

ರೊಪ್ಪದಲ್ಲಿ ದನಗಳು
ಫಾರಮ್ಮಿನಲ್ಲಿ ಕೋಳಿ
ಕತ್ತಲ ದೊಡ್ಡಿಗಳಲ್ಲಿ ನಾವು!
ಎತ್ತಿನ ಮೂತಿಯ ಕುಕ್ಕೆಯಂತೆ
ಗಾಳಿ ತೆಗೆದುಕೊಳ್ಳುವ ಸ್ವೇಚ್ಛೆಯೂ ಇರದ
ಪರದೆಗಳು (ಖೌಸಖಿಜಾ)

ಮುಸ್ಲಿಂ ಮಹಿಳೆಯರು ಅಂಥ ಸ್ಥಿತಿಯಲ್ಲಿರುವರೆಂದು ಮರುಕ ಪಡಲಾಗಿದೆ. ಪರದೆಗಳು, ಬುರ್ಖಾಗಳನ್ನು ಯಾವುದೇ ಜೀವಿ ತನ್ನ ಹುಟ್ಟಿನಿಂದ ತಾನು ಜೀವಿಸಲು ತನ್ನ ಅಜನ್ಮ ಹಕ್ಕಾಗಿ ಪಡೆದಿರುವ ಸಹಜ ಸ್ವಾತಂತ್ರ್ಯವನ್ನು ಕಸಿದಿರುವ ಸೂಚಕವಾಗಿ ಕಾಣಿಸಲಾಗಿದೆ. ಇಂಥ ಮುಸ್ಲಿಂ ಮಹಿಳೆಯರ ಬದುಕು ನಿರ್ದಿಷ್ಟ ಉದ್ದೇಶ. ಗುರಿ ಇಲ್ಲದೆ ನಿರುಪಯೋಗವಾಗಿದೆ.

ಮಣ್ಣ ಗೋಡೆಗಳ ಮೇಲೆ ಜೊಂಡು ಮೊಳೆತಿದೆ
ನಮ್ಮ ಬದುಕುಗಳಂತೆ
ನಮ್ಮ ದಾದಿಮಾ ರಂಜಾನಿನ ದಿನ
ಹೊಸ ಸೀರೆ ಉಟ್ಟಂತೆ ಕಂಗೊಳಿಸುತ್ತಿತ್ತು
ಮನೆ. (ಚಿಹ್ನೆ)

ಹಳೆ ಬಟ್ಟೆ ಹರಿದು ಹೊಸ ಬಟ್ಟೆ ಧರಿಸುವುದು ದಿನನಿತ್ಯದ ಸಾಮಾನ್ಯ ವಿಷಯವಾಗಿದ್ದರೂ ಅದು ಇಂಥವರ ಬಾಳಿನಲ್ಲಿ ವಿಶೇಷ ಅರ್ಥ ಪಡೆದು ದಾರುಣತೆಯ ರೂಪ ಧರಿಸುತ್ತದೆ. ಹಾಗಾಗಿ ಕವಯತ್ರಿ ಪುರೋಹಿತಶಾಹಿ ಮತ್ತು ಪುರುಷಶಾಹಿಯೊಂದಿಗಿನ ಮುಸ್ಲಿಂ ಮಹಿಳೆಯರ ಸಂಬಂಧವನ್ನು ಪ್ರಿಯೆ–ಪ್ರಿಯತಮೆ ಸಂಬಂಧದ ಲ್ಲಿರಿಸಿ ಪ್ರಿಯೆಯಾಗಿ ಹೀಗೆ ಕೇಳಿದ್ದಾಳೆ.

ನೀನಿತ್ತ ಬರದ ಕಹಿ ಅನುಭವಗಳನ್ನು
ಯಾವ ಅಂಚೆಯಲ್ಲಿ ಪ್ಯಾಕು ಮಾಡಿ ಕಳುಹಿಸಲಿ
ಪ್ರತಿ ಬಾರಿಯೂ ಬಾನ ಸೀಳಿಕೊಂಡು ಹಾರುವ
ನೀನೊಮ್ಮೆ ಹಿಂದಿರುಗಿ ನೋಡು
ಕಿಟಕಿಯಾಚೆ ಶೂನ್ಯ ತುಂಬಿಕೊಂಡ ಇನ್ನೊಂದು
ಬಾನು
ದಾರಿದ್ರ್ಯ (ಇನ್ನೊಂದು ಆಕಾಶ)

ಭಾರತೀಯ ಮುಸ್ಲಿಂ ಮಹಿಳೆಯರು ಅರಬ್ ಮುಸ್ಲಿಮ್ ಪುರುಷರಿಗೆ ಭೋಗದ ಮತ್ತು ಮೋಜಿನ ವಸ್ತು ಆಗಿರುವುದು ಕೂಡ ಇದೇ ವ್ಯಾಪ್ತಿಯಲ್ಲಿ ಸೇರಿದೆ. ಪುರುಷರ ಸ್ವಾತಂತ್ರ್ಯ ಮತ್ತು ಮಹಿಳೆಯರ ಸ್ವಾತಂತ್ರ್ಯಹೀನತೆಯನ್ನು ಅರಬ್ ಪುರುಷರ ಸಿರಿವಂತಿಕೆ ಮತ್ತು ಭಾರತೀಯ ಮುಸ್ಲಿಂ ಮಹಿಳೆಯರ ದಾರಿದ್ರ್ಯದೊಂದಿಗೆ ಸಮೀಕರಿಸ ಲಾಗಿದೆ. ಮಾನವನ ಬದುಕಿನಲ್ಲಿನ ಸ್ತ್ರೀಪುರುಷರ ನಡುವಿನ ತಾರತಮ್ಯ ಅಪರಿಮಿತವಾಗಿ ಬೆಳೆದಿದೆಯೆಂದೂ ಕಾಣಿಸಿದೆ.

ರಾಷ್ಟ್ರದಲ್ಲಿಯೋ ಅಂತಾರಾಷ್ಟ್ರದಲ್ಲೋ
ಏನೇ ನಡೆದರೂ ಹಠಾತ್ತಾಗಿ ನನ್ನ ಪರಿಸರದಲ್ಲಿ
ನಾನು ಅಪರಿಚಿತನಾಗುತ್ತೇನೆ (ಅಪರಿವಿತ)

ಇದರಿಂದ ಭಾರತೀಯ ಮುಸ್ಲಿಂ ಮಹಿಳೆ

ಅಸ್ತಿತ್ವವಿಲ್ಲದವಳಾಗಿ ಉಳಿದಿದ್ದಾಳೆಂಬ ಆಕ್ರೋಶ ಮನೆಮಾಡಿದೆ. ಏಕೆಂದರೆ ಹೆಣ್ಣಿನ ಅಸ್ತಿತ್ವಹೀನತೆ ಅವಳ ಮೇಲಿನ ಅಕ್ರಮಣ, ದೌರ್ಜನ್ಯಗಳನ್ನು ಸುಲಭಗೊಳಿಸಿದೆ.

ಬಟ್ಟೆ ಹರಿದು ಚಿಂದಿ ಮಾಡಿದಂತೆ
ನಮ್ಮ ದೇಹವನ್ನು ಹರಿದು ಹಾಕುತ್ತಿದ್ದಾರೆ (ಒಂಟಿ ಕಫನ್)

ಹೀಗಾಗಿ ಇವರು ದುಃಖದ ತಳ ಮುಟ್ಟಿದ ವ್ಯಕ್ತಿಗಳಾಗಿ ತಮ್ಮ ಶೋಷಕರ ಸಂಪೂರ್ಣ ಪರಿಚಯದ ಹಿನ್ನೆಲೆಯಲ್ಲಿ ತಾತ್ವಿಕವಾಗಿ ಮಾತನಾಡುತ್ತಾರೆ ಕೂಡ. ಕವಯತ್ರಿ ಅಂಥ ಮಾತುಗಳಿಗೆ ಬಾಯಿಯಾಗಿದ್ದಾಳೆ ಇಲ್ಲಿ.

ಹೆಣ್ಣಿಗೆ ಗಂಡಿನ ಬೆತ್ತಲೆ ಎಷ್ಟು ಹಳೆಯದೋ
ಅರಾಜಕತೆ, ಅಮಾನುಷತೆ, ಕ್ರೂರತ್ವವೂ ಅಷ್ಟೇ ಹಳತು.

ಹೆಣ್ಣಲ್ಲದೆ ಗಂಡನ್ನು ಕ್ಷಮಿಸುವವರು ಯಾರು ?
ಎಂದೆಂದಿಗೂ ಜಗತ್ತು
ನನ್ನ ಮೊಲೆ ಕುಡಿವ ಹಸುಗೂಸು (ಭ್ರಷ್ಟ ಲೋಕ)

ಪುರೋಹಿತಶಾಹಿ ಮತ್ತು ಪುರುಷಶಾಹಿಗಳು ಅಧಿಕಾರಶಾಹಿ ನಾಣ್ಯದ ಎರಡು ಮುಖಗಳಾಗಿ ಇಲ್ಲಿ ಪರಿಣಮಿಸಿವೆ. ಅದರ ಎಲ್ಲ ಬಲಗಳನ್ನು ಜೀವನಾನುಭವದ ಮಿತಿಗೆ ಒಳಪಡಿಸಿದೆ ಮತ್ತು ಅದನ್ನು ನಕಾರಾತ್ಮಕ ಚೌಕಟ್ಟಿಗೆ ಆಳವಡಿಸಲಾಗಿದೆ. ಅಧಿಕಾರಕ್ಕಿಂತ ಅನುಭವ ಮಾನವನನ್ನು ಮಾಗಿಸುವ ಕ್ರಮವನ್ನೂ ಹೇಳಿದೆ. ಅಲ್ಲದೆ ಹೆಣ್ಣಿನ ಕ್ಷಮಾಗುಣ ಮತ್ತು ಪೋಷಕ ಶಕ್ತಿಯ ಮುಂದೆ ಗಂಡಿನ ಎಲ್ಲ ಅಧಿಕಾರ ಶಕ್ತಿಗಳು ಕಳೆಗುಂದುವ ಸಾರ್ವಕಾಲಿಕ ಸಂಗತಿಯನ್ನು ಮನಗಾಣಿಸಿ ಅಭಿವ್ಯಕ್ತಿಸಿದೆ. ಈ ಮೂಲಕ ಇಂದಿನ ಸ್ತ್ರೀವಾದಿ ಮನೋಧರ್ಮದ ಪ್ರತಿಪಾದನೆಯನ್ನು ಮಾಡಿದೆ. ಅಲ್ಲದೆ ಪ್ರಕೃತಿಯಲ್ಲಿ ಜೀವ ಜನಾಂಗಗಳು ಸತತವಾಗಿ ಮುಂದುವರೆಯುವಲ್ಲಿ ಸ್ತ್ರೀ ವಹಿಸುವ ಹಿರಿಯ ಪಾತ್ರದ ಮಹತ್ವದ ಗುಣ ಲಕ್ಷಣಗಳನ್ನು ಎತ್ತಿ ಹೇಳಿದೆ. ಆದರೂ ಸ್ತ್ರೀ ಪುರುಷ ಸಂಬಂಧ ಮತ್ತು ಅಸ್ತಿತ್ವಗಳ ಸ್ವರೂಪದ ಬಗ್ಗೆ ಆರೋಗ್ಯಕರವಾಗಿ ಕಂಡಿದೆ ಮತ್ತು ಕಾಣಿಸಿದೆ.

ಸಕ್ಕರೆ ಉಂಡೆಯಲ್ಲಿನ
ಕಡಲೆಪಪ್ಪಿನಂತೆ
ಅವರೂ ನಾವು
ಅಲಾಯಿಬಲಾಯಿ ತೆಗೆದುಕೊಳ್ಳುವ
ದರ್ಗಾಗಳು
ಆಕಾಶದಲ್ಲೆಲ್ಲ ಕಾಣಿಸುತ್ತವೆ (ದರ್ಗಾ ದಾರಿಗೆ ಮೈಲಿಗೆ ಇಲ್ಲ)

ಸ್ತ್ರೀ ಪುರುಷ ಸಂಬಂಧ ಪರಸ್ಪರ ಅವಲಂಬಿತ ಮತ್ತು ಸ್ನೇಹಮಯ ಎಂಬ ತನ್ನ ಧೋರಣೆಯಿಂದ ಪುರುಷ ನಿರ್ಮಿತವಾದ ಅಧಿಕಾರ ಸ್ಥಾಪಿಸುವ ಎಲ್ಲ ಸಾಮಾಜಿಕ ಜೀವನ ಮೌಲ್ಯಗಳನ್ನು ಗಾಳಿಗೆ ತೂರಿದೆ ಮತ್ತು ಅವನ್ನು ಮರುಕಟ್ಟಿಕೊಟ್ಟಿದೆ. ಈ ತೆಲುಗು ಕವಿತೆಗಳು ಆಂಧ್ರ ಸಾಹಿತ್ಯ ಸಂದರ್ಭಕ್ಕೆ ಅನುಗುಣವಾಗಿ ಮೈ ತಳೆದಿದ್ದರೂ ಕನ್ನಡದ ಸಂದರ್ಭದಲ್ಲೂ ತಾಜಾತನದಿಂದ ಕೂಡಿವೆ. ಹೀಗಿದ್ದರೂ ತೆಲುಗು ಮತ್ತು ಕನ್ನಡ ಸಾಹಿತ್ಯ ಸಂದರ್ಭಗಳು ಒಂದೇ ಅಲ್ಲ. ವಿಶೇಷವಾಗಿ ತೆಲುಗಿನಲ್ಲಿ ಶ್ರೀಶ್ರೀ ಮತ್ತು ಕನ್ನಡದಲ್ಲಿ ಅಡಿಗರು ತಮ್ಮ ಕೃತಿಗಳ ಮೂಲಕ ರೂಪಿಸಿದ ಮನಸ್ಥಿತಿ ಒಂದೇ ಎಂದು ಹೇಳಲುಬರುವುದಿಲ್ಲ. ಆದರೂ ಇವೆರಡೂ ಭಾಷೆಗಳಲ್ಲಿ ಅಲ್ಲದೆ ಇಡೀ ಭಾರತೀಯ ಸಾಹಿತ್ಯದ ಆಧುನಿಕ ಸಂದರ್ಭದಲ್ಲಿ ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಹಾಗೂ ಸ್ತ್ರೀ ವಾದದಂಥ ಆಧುನಿಕ ವಿಚಾರಧಾರೆಗಳು ಏಕ ಪ್ರಕಾರವಾಗಿ ಪ್ರಭಾವಿತವಾಗಿರುವುದು ಬೇರೆ.

ಷಾಜಹಾನರು ತಮ್ಮ ಅನುಭವ ವಿಚಾರವನ್ನು ಕವಿತೆಯನ್ನಾಗಿಸುವ ಕ್ರಮದಲ್ಲಿ ತಮ್ಮ ಕಾವ್ಯದ ಆಶಯ ಮತ್ತು ವಿಧಾನವನ್ನು ಒಂದಾಗಿ ಹೊಸೆದಿದ್ದಾರೆ. ಹಾಗಾಗಿ ಅವರು ನೀಡಿರುವ ಚಿತ್ರಗಳು ಅನುಭವ ಮೂಲದಿಂದ ಬಂದಿರುವುದು ಓದುಗರ ಗಮನಕ್ಕೆ ಥಟ್ಟನೆ ಬರುತ್ತದೆ. ಕಾವ್ಯವನ್ನು ಸಾಮಾನ್ಯವಾಗಿ 'ನುಡಿಗೆಟ್ಟ ನುಡಿ' ಎಂದು ಹೇಳಲಾಗುತ್ತದೆ. ಇಲ್ಲಿ 'ಜೀವನಗೆಟ್ಟ ಜೀವನವೇ ಮೈ ತಳೆದಿರುರುವುದರಿಂದ 'ಜೀವನಗೆಟ್ಟ ಜೀವನ' ನುಡಿಗೆಟ್ಟ ನುಡಿ'ಯಾಗಿ ಮೈಪಡೆದಿದೆ. ಹಾಗಾಗಿಯೆ ಓದುಗನಿಗೆ ತಾಜಾತನ ದಟ್ಟವಾಗಿ ಅನುಭವಕ್ಕೆ ಬರುತ್ತದೆ. ಇಲ್ಲಿನ ನುಡಿಚಿತ್ರಗಳು ಅಲಂಕಾರವಾಗಿ ಮೂಡದೆ ಜೀವಾನಾನುಭವದ ಭಾಗವಾಗಿ ಜೀವ ತಳೆದಿವೆ, ತಮ್ಮ ಸಾಚಾತನದಿಂದ ಅನುಭವದ ಆಳಕ್ಕೆ ಓದುಗನನ್ನು ಕೈ ಚಾಚಿ ಸೆಳೆಯುತ್ತವೆ.

ಒಂದು ಭಾಷಾ ಸಂಸ್ಕೃತಿಗೆ 'ಅಪರಿಚಿತ'ವಾದ ಕೃತಿಯನ್ನು 'ಸುಪರಿಚಿತ'ವನ್ನಾಗಿ ಮಾಡುವುದೆ ಅನುವಾದ ಎಂದು ಹೇಳಲಾಗಿದೆ. ಹಾಗಾಗಿಯೆ ಅನುವಾದಗಳು ರೂಪಾಂತರ, ಭಾಷಾಂತರ, ಪ್ರೇರಣೆ, ಮರುಬರವಣಿಗೆ ಮೊದಲಾದ ವಿವಿಧ ರೂಪಗಳಲ್ಲಿ ಕಾಣಿಸಿಕೊಂಡಿವೆ. ಅದೇನೆ ಇರಲಿ, ಉಭಯಭಾಷಾ ಕವಿಗಳೆಂದು ಒಪ್ಪಿತರಾಗಿರುವ ಮಿತ್ರರಾದ ಸ.ರಘುನಾಥ ಅವರ ಶ್ರಮ ಈ ನಿಟ್ಟಿನಿಂದ ಯಶಸ್ಸು ಕಂಡಿದೆ. ಆದರೂ ಕಾವ್ಯ ಸೌಷ್ಟವದಲ್ಲಿ ಸಡಿಲತೆ ಮತ್ತು ವೈಚಾರಿಕತೆಯ ಭಾರ ಈ ಸಂಕಲನದಲ್ಲಿ ಓದುಗನನ್ನು ವಿಕರ್ಷಿಸುವ ಅಂಶಗಳು ಎಂದೇ ಹೇಳಬೇಕು. ಇದು ಮೂಲ ಕಾವ್ಯದಲ್ಲಿರುವ ದೋಷವೋ ಅನುವಾದದಲ್ಲಿ ಉಂಟಾದ ದೋಷವೋ ತಿಳಿಯದು. ಅನುವಾದಕರು ಮೂಲಕ್ಕೆ ತೋರಿರುವ ನಿಷ್ಠತೆ ಮತ್ತು ತೆಗೆದುಕೊಂಡಿರುವ ಸ್ವಾತಂತ್ರ್ಯವನ್ನು ಉಭಯ ಭಾಷಾ ಪರಿಣತರು ಪರಿಶೀಲಿಸಬೇಕು. ಹಾಗೆಯೇ ಅನುವಾದವನ್ನು ಒಂದು 'ಓದು', 'ವ್ಯಾಖ್ಯಾನ' ಎಂದೂ ಹೇಳಲಾಗುತ್ತದೆ. ಈ ಹಿನ್ನೆಲೆಯಲ್ಲಿ 'ನಿರ್ಬಂಧಿತ' ಸಮುದಾಯದ ಯಾತನಾಮಯ ಬದುಕಿನ ಎಳೆಗಳು ಆಗಿ ಕಂಡಿರುವ ಈ ಸಂಕಲನವನ್ನು ಅನುವಾದಕರು "ಇಲ್ಲಿನ ಸಂವೇದನೆ ಮುಸ್ಲಿಂ ಸ್ತ್ರೀ ಸಂವೇದನೆ ಎಂಬುದನ್ನು ಪ್ರತ್ಯೇಕಿಸಿ ನೋಡದಿದ್ದರೆ, ಕೆಲವು ಸಾಂಸ್ಕೃತಿಕ ಅಂಶಗಳ ಭಿನ್ನತೆಯನ್ನು ಪಕ್ಕಕ್ಕಿಟ್ಟರೆ ಇಡೀ ಸ್ತ್ರೀ ವರ್ಗದ ಸಂವೇದನೆಯೇ ಆಗಿದೆ" ಎಂದು ಕನ್ನಡಕ್ಕೆ ತಂದಿದ್ದಾರೆ. ಅಂದರೆ ಈ ಅನುವಾದಕ್ಕೆ ಅದರ ಸಮುದಾಯ ನಿಷ್ಟ ಪ್ರತ್ಯೇಕ ವಿಶಿಷ್ಟ ಅಂಶಗಳಿಗಿಂತ ಸಾಮಾನ್ಯೀಕರಣ ಅಂಶಗಳು ಮುಖ್ಯವಾಗಿದೆ. ಬಹುಶ: ಸ್ತ್ರೀ ವಾದಿ ವಿಚಾರಧಾರೆಗೆ ನಮ್ಮ ಕಾಲದಲ್ಲಿ ದೊರೆತಿರುವ ಮನ್ನಣೆಯ ಕಾರಣವಾಗಿ, ಓದುಗರ ಆಸಕ್ತ ವಿಷಯವಾದ ಸ್ತ್ರೀ ಸಂವೇದನೆಯ ಭಾಗವಾಗಿ ಮಾತ್ರ ಪ್ರಸ್ತುತ ಕೃತಿಯನ್ನು ಅನುವಾದ ಮಾಡಲಾಗಿದೆ.

ಸಮಕಾಲೀನ ಸಂದರ್ಭದಲ್ಲಿ ವಾದಿ ಸ್ತ್ರೀ ವಾದಿ ವಿಚಾರಧಾರೆಯ ಹಿನ್ನೆಲೆಯಿಂದ ತಮ್ಮ ಕೃತಿಯಲ್ಲಿ ಷಾಜಹಾನ್ ಧಾರ್ಮಿಕ ಪ್ರತಿವಾದಿಯಾಗಿಯೆ ತಮ್ಮ ಗಟ್ಟಿ ದನಿಯನ್ನು ಎತ್ತಿದ್ದಾರೆ. ಆದರೂ ಧಾರ್ಮಿಕ ಹಿನ್ನೆಲೆಯಲ್ಲಿ ವಿವಾದಕ್ಕೆ ಗುರಿಯಾಗದೆ ಉಳಿದಿದ್ದಾರೆ. ಹನ್ನೊಂದನೆಯ ಶತಮಾನದಲ್ಲಿ ಜೀವಿಸಿದ್ದ ಉಮ್ಮರ್ ಖಯ್ಯಾಮ್ ತನ್ನ ಕಾಲಾವಧಿಯಲ್ಲಿ ಹಲವು ಜ್ಞಾನಶಾಖೆಗಳಲ್ಲಿ ಪರಿಣತಿ ಪಡೆದು ಮಾನ್ಯನಾಗಿದ್ದ ವಿದ್ವಾಂಸ. ಆತ ಬಹುಶಃ ತನ್ನ ಧರ್ಮದ ಮೊತ್ತಮೊದಲ ಧಾರ್ಮಿಕ ಪ್ರತಿವಾದಿಯಾಗಿದ್ದಿರಬಹುದು. ಆತನ ಈ ಪ್ರತಿವಾದಿತನವನ್ನು ಅವನ ರುಬಾಯತ್‌ಗಳೂ ಸಮರ್ಥವಾಗಿ ಪ್ರತಿನಿಧಿಸುತ್ತಿದ್ದ ಕಾರಣದಿಂದಲೋ ಏನೋ ತನ್ನ ಕಾಲದಲ್ಲಿ ಪರ್ಷಿಯಾದಲ್ಲಿ ಆತ ಕವಿಯೆಂದು ಮಾನ್ಯನಾಗಿರಲಿಲ್ಲ. ಹೀಗಿದ್ದರೂ ಉಮರ್ ಖಯ್ಯಾಮ್ ಗೂ ಷಾಜಹಾನ್ ಗೂ ಎಲ್ಲೂ ತಾಳೆ ಹಾಕಲು ಸಾಧ್ಯವಿಲ್ಲ. ಈ ಇಬ್ಬರನ್ನು ಕನ್ನಡಕ್ಕೆ ಅನುವಾದ ಮಾಡಿದವರು ಮಾತ್ರ ಆ ಮತ ವಿಚಾರಗಳಿಗೆ ಅನ್ಯವಾದ ಸಮುದಾಯಕ್ಕೆ ಸೇರಿದವರು ಎಂಬುದು ಕಾಕತಾಳೀಯವಷ್ಟೆ. ಡಿವಿಜಿಯವರು ಉಮರನ ಒಸಗೆ ಪ್ರಕಟಿಸಿದಾಗ ಅದು ಕನ್ನಡಕ್ಕೊಂದು ಹೊಸದನಿಯನ್ನು ಪರಿಚಯಿಸಿತ್ತು. ಅದೇ ಮಾತು ನಖಾಬ್ ಅನುವಾದಕ್ಕೆ ಅನ್ವಯವಾಗುವುದಿಲ್ಲ. ಅನುಭವನಿಷ್ಟ ಮತ್ತು ಪ್ರಾಮಾಣಿಕ ಅಭಿವ್ಯಕ್ತಿಯನ್ನು ಹೊರತುಪಡಿಸಿ ಅದು ಪ್ರತಿಪಾದಿಸುವ ವಿಚಾರಧಾರೆ ಹೊಸತೇನಲ್ಲ. ಹಾಗಾಗಿ ಡಿವಿಜಿಯರವರಂತೆ ಸ.ರಘುನಾಥರ ಬೆಳವಣಿಗೆ ಪೂರಕವೋ ಅಲ್ಲವೋ ಎಂಬುದನ್ನು ಕಾದು ನೋಡಬೇಕಾಗಿಲ್ಲ. ■

# THREE HUNDRED RAMAYANAS:

## Five Examples and Three Thoughts on Translation

How many Ramayanas ? Three hundred? Three thousand? At the end of some Ramayanas , a question is sometimes asked: How many Ramayanas have there been? And there are stories that answer the question. Here is one.

One day when Rama was sitting on his throne, his ring fell off. When it touched the earth, it made a hole in the ground and disappeared into it. It was gone. His trusty henchman, Hanuman, was at his feet. Rama said to Hanuman, "Look, my ring is lost. Find it for me."

Now Hanuman can enter any hole, no matter how tiny. He had the power to become the smallest of the small and larger than the largest thing. So he took on a tiny form and went down the hole.

He went and went and went and suddenly fell into the netherworld. There were women down there. "Look, a tiny monkey! It's fallen from above? Then they caught him and placed him on a platter (thali ). The King of Spirits (bhut ), who lives in the netherworld, likes to eat animals. So Hanuman was sent to him as part of his dinner, along with his vegetables. Hanuman sat on the platter, wondering what to do.

While this was going on in the netherworld, Rama sat on his throne on the earth above. The sage Vasistha and the god Brahma came to see him. They said to Rama, "We want to talk privately with you. We don't want anyone to hear what we say or interrupt it. Do we agree?"

"All right," said Rama, "we'll talk."

Then they said, "Lay down a rule. If anyone comes in as we are talking, his head should be cut off."

"It will be done," said Rama.

Who would be the most trustworthy person to guard the door? Hanuman had gone down to fetch the ring. Rama trusted no one more than Laksmana, so he asked Laksmana to stand by the door. "Don't allow anyone to enter," he ordered.

Laksmana was standing at the door when the sage Visvamitra appeared and said, "I need to see Rama at once. It's urgent. Tell me, where is Rama?"

Laksmana said, "Don't go in now. He is talking to some people. It's important."

"What is there that Rama would hide from me?" said Visvamitra. "I must go in, right now."

Laksmana said, "I'11 have to ask his permission before I can let you in."

"Go in and ask then."

"I can't go in till Rama comes out. You'll have to wait."

"If you don't go in and announce my presence, I'll burn the entire kingdom of Ayodhya with a curse," said Visvamitra.

Laksmana thought, "If I go in now, I'll die. But if I don't go, this hotheaded man will burn down the kingdom. All the subjects, all things living in it, will die. It's better that I alone should die."

✍ **A. K. Ramanujan**

So he went right in.

Rama asked him, "What's the matter?"

"Visvamitra is here."

"Send him in."

So Visvamitra went in. The private talk had already come to an end. Brahma and Vasistha had come to see Rama and say to him, "Your work in the world of human beings is over. Your incarnation as Rama must now be given up. Leave this body, come up, and rejoin the gods." That's all they wanted to say.

Laksmana said to Rama, "Brother, you should cut off my head."

Rama said, "Why? We had nothing more to say. Nothing was left. So why should I cut off your head?"

Laksmana said, "You can't do that. You can't let me off because I'm your brother. There'll be a blot on Rama's name. You didn't spare your wife. You sent her to the jungle. I must be punished. I will leave."

Laksmana was an avatar of Sesa, the serpent on whom Visnu sleeps. His time was up too. He went directly to the river Sarayu and disappeared in the flowing waters.

When Laksmana relinquished his body, Rama summoned all his followers, Vibhishana, Sugriva, and others, and arranged for the coronation of his twin sons, Lava and Kusa. Then Rama too entered the river Sarayu.

All this while, Hanuman was in the netherworld. When he was finally taken to the King of Spirits, he kept repeating the name of Rama. "Rama Rama Rama . . ."

Then the King of Spirits asked, "Who are you?"

"Hanuman."

"Hanuman? Why have you come here?"

"Rama's ring fell into a hole. I've come to fetch it."

The king looked around and showed him a platter. On it were thousands of rings. They were all Rama's rings. The king brought the platter to Hanuman, set it down, and said, "Pick out your Rama's ring and take it."

They were all exactly the same. "I don't know which one it is," said Hanuman, shaking his head.

The King of Spirits said, "There have been as many Ramas as there are rings on this platter. When you return to earth, you will not find Rama. This incarnation of Rama is now over. Whenever an incarnation of Rama is about to be over, his ring falls down. I collect them and keep them. Now you can go."

So Hanuman left.

This story is usually told to suggest that for every such Rama there is a Ramayana .[1] The number ofRamayanas and the range of their influence in South and Southeast Asia over the past twenty-five hundred years or more are astonishing. Just a list of languages in which the Rama story is found makes one gasp: Assamese, Balinese, Bengali, Cambodian, Chinese, Gujarati, Javanese, Kannada, Kashmiri, Khotanese, Laotian, Malaysian, Marathi, Oriya, Prakrit, Sanskrit, Santali, Sinhalese, Tamil, Telugu, Thai, Tibetan-to say nothing of Western languages. Through the centuries, some of these languages have hosted more than one telling of the Rama story. Sanskrit alone contains some twenty-five or more tellings

belonging to various narrative genres (epics, kavyas or ornate poetic compositions, puranas or old mythological stories, and so forth). If we add plays, dance-dramas, and other performances, in both the classical and folk traditions, the number of Ramayanas grows even larger. To these must be added sculpture and bas-reliefs, mask plays, puppet plays and shadow plays, in all the many South and Southeast Asian cultures.[2] Camille Bulcke, a student of the Ramayana, counted three hundred tellings.[3] It's no wonder that even as long ago as the fourteenth century, Kumaravyasa, a Kannada poet, chose to write a Mahabharata , because he heard the cosmic serpent which upholds the earth groaning under the burden of Ramayana poets (tinikidanu phaniraya ramayanada kavigala bharadali). In this paper, indebted for its data to numerous previous translators and scholars, I would like to sort out for myself, and I hope for others, how these hundreds of tellings of a story in different cultures, languages, and religious traditions relate to each other: what gets translated, transplanted, transposed.

Valmiki and Kampan: Two Ahalyas

Obviously, these hundreds of tellings differ from one another. I have come to prefer the word tellings to the usual terms versions or variants because the latter terms can and typically do imply that there is an invariant, an original or Ur -text-usually Valmiki's Sanskrit Ramayana , the earliest and most prestigious of them all. But as we shall see, it is not always Valmiki's narrative that is carried from one language to another.

It would be useful to make some distinctions before we begin. The tradition itself distinguishes between the Rama story (ramakatha ) and texts composed by a specific person-Valmiki, Kampan, or Krttivasa, for example. Though many of the latter are popularly called Ramayanas (like Kamparamayanam ), few texts actually bear the title Ramayana ; they are given titles like Iramavataram (The Incarnation of Rama), Ramcaritmanas (The Lake of the Acts of Rama), Ramakien (The Story of Rama), and so on. Their relations to the Rama story as told by Valmiki also vary. This traditional distinction between katha (story) and kavya (poem) parallels the French one between sujet and recit , or the English one between story and discourse.[4] It is also analogous to the distinction between a sentence and a speech act. The story may be the same in two tellings, but the discourse may be vastly different. Even the structure and sequence of events may be the same, but the style, details, tone, and texture-and therefore the import-may be vastly different.

Here are two tellings of the "same" episode, which occur at the same point in the sequence of the narrative. The first is from the first book (Balakanda ) of Valmiki's Sanskrit Ramayana ; the second from the first canto (Palakantam) of Kampan's Iramavataram in Tamil. Both narrate the story of Ahalya.

The Ahalya Episode: Valmiki; Seeing Mithila, Janaka's white and dazzling city, all the sages cried out in praise, "Wonderful!

How wonderful!"

Raghava, sighting on the outskirts of Mithila an ashram, ancient, unpeopled, and lovely, asked the sage,

"What is this holy place, so like an ashram but without a hermit?

Master, I'd like to hear: whose was it?"

Hearing Raghava's words, the great sage Visvamitra, man of fire, expert in words answered, "Listen,

Raghava, I'll tell you whose ashram this was and how it was cursed by a great man in anger.

It was great Gautama's, this ashram that reminds you of heaven, worshiped even by the gods. Long ago, with Ahalya he practiced tapas[5] here for countless years. Once, knowing that Gautama was away, Indra (called Thousand Eyes) Saci's husband, took on the likeness of the sage, and said to Ahalya:

'Men pursuing their desire do not wait for the proper season, O you who have a perfect body. Making love with you: that's what I want.

That waist of yours is lovely.'

She knew it was Indra of the Thousand Eyes in the guise of the sage. Yet she, wrongheaded woman, made up her mind, excited, curious about the king of the gods.

And then, her inner being satisfied, she said to the god, 'I'm satisfied, king of the gods. Go quickly from here.

O giver of honor, lover, protect yourself and me.'

And Indra smiled and said to Ahalya,

'Woman of lovely hips, I am very content. I'll go the way I came.' Thus after making love, he came out of the hut made of leaves.

And, O Rama, as he hurried away, nervous about Gautama and flustered, he caught sight of Gautama coming in, the great sage, unassailable by gods and antigods, empowered by his tapas , still wet with the water of the river he'd bathed in, blazing like fire, with kusa grass and kindling in his hands.

Seeing him, the king of the gods was terror-struck, his face drained of color.

The sage, facing Thousand Eyes now dressed as the sage, the one rich in virtue and the other with none, spoke to him in anger: 'You took my form, you fool, and did this that should never be done. Therefore you will lose your testicles.'

At once, they fell to the ground, they fell even as the great sage spoke his words in anger to Thousand Eyes.

Having cursed Indra, he then cursed Ahalya: 'You, you will dwell here many thousands of years, eating the air, without food, rolling in ash, and burning invisible to all creatures.

When Rama, unassailable son of Dasaratha, comes to this terrible wilderness, you will become pure, you woman of no virtue, you will be cleansed of lust and confusion.

Filled then with joy, you'll wear again your form in my presence.' And saying this to that woman of bad conduct, blazing Gautama abandoned the ashram, and did his tapas on a beautiful Himalayan peak, haunt of celestial singers and perfected beings.

Emasculated Indra then spoke to the gods led by Agni attended by the sages and the celestial singers.

'I've only done this work on behalf of the gods, putting great Gautama in a rage, blocking his tapas .

He has emasculated me and rejected her in anger.

Through this great outburst of curses, I've robbed him of his tapas . Therefore, great gods, sages, and celestial singers, help me, helper of the gods, to regain my testicles.' And the gods, led by Agni, listened to Indra of the Hundred Sacrifices and went with the Marut hosts to the divine ancestors, and said,

'Some time ago, Indra, infatuated, ravished the sage's wife and was then emasculated by the sage's curse. Indra, king of gods, destroyer of cities, is now angry with the gods.

This ram has testicles but great Indra has lost his.

So take the ram's testicles and quickly graft them on to Indra.

A castrated ram will give you supreme satisfaction and will be a source of pleasure.

People who offer it will have endless fruit.

You will give them your plenty.'

Having heard Agni's words, the Ancestors got together and ripped off the ram's testicles and applied them then to Indra of the Thousand Eyes.

Since then, the divine Ancestors eat these castrated rams and Indra has the testicles of the beast through the power of great Gautama's tapas .

Come then, Rama, to the ashram of the holy sage and save Ahalya who has the beauty of a goddess."

Raghava heard Visvamitra's words and followed him into the ashram with Laksmana: there he saw Ahalya, shining with an inner light earned through her penances, blazing yet hidden from the eyes of passersby, even gods and antigods.[6]

The Ahalya Episode: Kampan They came to many-towered Mithila and stood outside the fortress.

On the towers were many flags. There, high on an open field, stood a black rock that was once Ahalya, the great sage's wife who fell because she lost her chastity, the mark of marriage in a house. Rama's eyes fell on the rock, the dust of his feet wafted on it.

Like one unconscious coming to, cutting through ignorance, changing his dark carcass for true form as he reaches the Lord's feet, so did she stand alive formed and colored again as she once was.

Rama asks Visvamitra why this lovely woman had been turned to stone. Visvamitra replies:

"Listen. Once Indra,

Lord of the Diamond Axe, waited on the absence of Gautama, a sage all spirit, meaning to reach out for the lovely breast of doe-eyed Ahalya, his wife.

Hurt by love's arrows, hurt by the look in her eyes that pierced him like a spear, Indra writhed and cast about for stratagems; one day, overwhelmed and mindless, he isolated the sage; and sneaked into the hermitage wearing the exact body of Gautama whose heart knew no falsehoods.

Sneaking in, he joined Ahalya; coupled, they drank deep of the clear new wine of first-night weddings; and she knew.

Yet unable to put aside what was not hers, she dallied in her joy, but the sage did not tarry, he came back, a very Siva with three eyes in his head.

Gautama, who used no arrows from bows, could use more inescapable powers of curse and blessing.

When he arrived, Ahalya stood there, stunned, bearing the shame of a deed that will not end in this endless world.

Indra shook in terror, started to move away in the likeness of a cat.

Eyes dropping fire, Gautama saw what was done, and his words flew like the burning arrows at your hand:

'May you be covered by the vaginas of a thousand women!'

In the twinkle of an eye they came and covered him. Covered with shame, laughingstock of the world,

Indra left.

The sage turned to his tender wife

and cursed:

'O bought woman!

May you turn to stone!' and she fell at once a rough thing of black rock.

Yet as she fell she begged:

'To bear and forgive wrongs is also the way of elders.

O Siva-like lord of mine, set some limit to your curse!'

So he said: 'Rama will come, wearing garlands that bring the hum of bees with them.

When the dust of his feet falls on you, you will be released from the body of stone.'

The immortals looked at their king and came down at once to Gautama in a delegation led by Brahma and begged of Gautama to relent.

Gautama's mind had changed and cooled. He changed the marks on Indra to a thousand eyes and the gods went back to their worlds, while she lay there, a thing of stone.

That was the way it was. while she lay there, a thing of stone.

From now on, no more misery, only release, for all things in this world.

O cloud-dark lord who battled with that ogress, black as soot, I saw there the virtue of your hands and here the virtue of your feet."[7]

Let me rapidly suggest a few differences between the two tellings. In Valmiki, Indra seduces a willing Ahalya. In Kampan, Ahalya realizes she is doing wrong but cannot let go of the forbidden joy; the poem has also suggested earlier that her sage-husband is all spirit, details which together add a certain psychological subtlety to the seduction. Indra tries to steal away in the shape of a cat, clearly a folklore motif (also found, for example, in the Kathasaritsagara , an eleventh-century Sanskrit compendium of folktales).[8] He is cursed with a thousand vaginas which are later changed into eyes, and Ahalya is changed into frigid stone. The poetic justice wreaked on both offenders is fitted to their wrongdoing. Indra bears the mark of what he lusted for, while Ahalya is rendered incapable of responding to anything. These motifs, not found in Valmiki, are attested in South Indian folklore and other southern Rama stories, in inscriptions and earlier Tamil poems, as well as in non-Tamil sources. Kampan, here and elsewhere, not only makes full use of his predecessor Valmiki's materials but folds in many regional folk traditions. It is often through him that they then become part of other Ramayanas .

***(to be contd.)***

# ಕೆರೆಗೆ ಹಾರ ಒಂದು ಸಾರ್ಥಕ ಪ್ರಯತ್ನ

ಇತ್ತೀಚೆಗೆ ದೊಂಬಿವಲಿಯ ಅನುಜಾ ಮಹಿಳಾ ಸಂಸ್ಥೆಯ ಸದಸ್ಯೆಯರು, ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ವರ್ಲಿಯ ಪ್ರತಿಷ್ಠಿತ ನೆಹರೂ ಸೆಂಟರ್ ನಲ್ಲಿ ಕೆರೆಗೆಹಾರ ಎನ್ನುವ ಗೀತ ರೂಪಕವನ್ನು ಪ್ರದರ್ಶಿಸಿದರು. ಕನ್ನಡ ಪ್ರೇಕ್ಷಕರನ್ನು ಅಪಾರ ಸಂಖ್ಯೆಯಲ್ಲಿ ಸೇರಿಸಿದ್ದು ಈ ಕಾರ್ಯಕ್ರಮದ ಒಂದು ವಿಶೇಷ. ಡಾ. ಸುಮಾ ದ್ವಾರಕಾನಾಥ್ ಅವರ ನಿರ್ದೇಶನದಲ್ಲಿ ಪ್ರದರ್ಶನಗೊಂಡ ಈ ನಾಟಕವು ಉತ್ತಮ ಕೊರಿಯೋಗ್ರಫಿ, ಹಿನ್ನೆಲೆ ಸಂಗೀತ, ಬೆಳಕು ಸಂಯೋಜನೆ ಹಾಗೂ ಆಕರ್ಷಕ ವಸ್ತ್ರ ವಿನ್ಯಾಸ ಗಳಿಂದ ಕೂಡಿ ಪ್ರೇಕ್ಷಕರ ಮನತಣಿಸುವಲ್ಲಿ ಸಫಲವಾಯಿತು. ರಾಷ್ಟ್ರೀಯ ನಾಟಕೋತ್ಸವಗಳಲ್ಲಿ ಕನ್ನಡ ನಾಟಕಗಳಿಗೆ ಪ್ರಾತಿನಿಧ್ಯ ದೊರಕಿಸಿಕೊಡ ಬೇಕೆಂಬ ಡಾ. ಸುಮಾ ದ್ವಾರಕಾನಾಥ್ ಅವರ ಕಳಕಳಿ ಪ್ರಾಮಾಣಿಕವಾದುದು. ಪಾತ್ರವರ್ಗದಲ್ಲಿದ್ದ ಸುಮಾದ್ವಾರಕಾನಾಥ್, ಸಾವಿತ್ರಿ ಮೂರ್ತಿ, ಸೀತಾ ದೇವಾಡಿಗ, ಇವರೆಲ್ಲಾ ಹೆಚ್ಚಿನವರು ಗೃಹಿಣಿಯರು. ಇಂತಹ ಅಮೆಚೂರ್ ತಂಡವೊಂದು ಕೈಗೊಂಡ ಈ ಪ್ರಯತ್ನ ಪ್ರಶಂಸನೀಯವಾದುದು.

ಕಲ್ಲನಕೇರಿ ಮಲ್ಲನಗೌಡ ಕಟ್ಟಿಸುವ ಕೆರೆಗೆ ನೀರು ಬಾರದೇ ಅದಕ್ಕೆ ಅವನ ಕೊನೆಯ ಸೊಸೆ ಭಾಗೀರಥಿಯನ್ನು ಕೆರೆಗೆ ಬಲಿಕೊಡುವುದರ ಮೂಲಕ ಕೆರೆಗೆ ನೀರು ಬರುತ್ತದೆನ್ನುವ ನಂಬಿಕೆಯ ಸುತ್ತ ಹೆಣೆದ ಕತೆಯಿದು. ಕೆರೆಗೆ ನೀರು ಬಾರದ ಆತಂಕ ಗೌಡನಿಗಿದ್ದರೆ ಅದಕ್ಕೆ ಹಾರವಾಗಬೇಕಾಗಿರುವ ತಲ್ಲಣ ಭಾಗೀರಥಿಗೆ. ತಾನು ಬಲಿಯಾಗಬೇಕಾಗಿ ಬಂದ ವ್ಯವಸ್ಥೆಯ ಎದುರು ಭಾಗೀರಥೀಯದು ಮೂಕರೋದನ. ಈ ಪಾತ್ರಕ್ಕೆ ಶ್ರೀಮತಿ ಸೀತಾ ದೇವಾಡಿಗ ಅವರು ನ್ಯಾಯ ಸಲ್ಲಿಸಿದ್ದರೆ, ಗೌಡನ ಪಾತ್ರದಲ್ಲಿ ಶ್ರೀಮತಿ ಡಾ. ಸುಧಾ ಗುಂಜೀಕರ್ ಪ್ರಬುದ್ಧವಾದ ಅಭಿನಯ ನೀಡಿದ್ದಾರೆ. ಹಿನ್ನೆಲೆಗೆ ಗ್ರಾಮೀಣ ಸಂಸ್ಕೃತಿಯ ಸೆಟ್ ಇದ್ದಿದ್ದರೆ ಈ ನಾಟಕಕ್ಕೆ ಇನ್ನಷ್ಟು ಮೆರಗು ಮೂಡುತ್ತಿತ್ತು. ಲಾಗಾಯ್ತಿನಿಂದ ಹೆಣ್ಣು ಬಲಿಪಶುವಾಗುತ್ತಿರುವ ಹಾಗೂ ಅವಳ ಬಲದಿಂದಲೇ ಸಂಸ್ಕೃತಿಯೊಂದು ಉದ್ಧಾರವಾಗುತ್ತಿರುವ ಸಂದೇಶವನ್ನು ಸಾರುವುದರಲ್ಲಿ ಈ ನಾಟಕದ ಪ್ರಯತ್ನ ಮೆಚ್ಚುವಂತಹುದು. ಅಮೆಚೂರ್ ತಂಡವೊಂದರ ಪ್ರಾಯೋಗಿಕ ಪ್ರಯತ್ನದ ಪ್ರತೀಕವಾಗಿ ಈ ಮಾತುಗಳನ್ನು ಹೇಳಲಾಗಿದೆ. ಇಲ್ಲಿ ಉಂಟಾದ ಕೆಲವು ಆಭಾಸಗಳನ್ನು (ಮಾದೇವರಾಯನ ಕಾಲಿನ ಬೆರಳಲ್ಲಿ ಉಂಗುರ, ಮುದಿ ಹೆಂಡತಿಗೆ ಕರಿ ಮೀಸೆಯ ತರುಣ ಗಂಡ, ಪಾತ್ರಧಾರಿಗಳ ಚಲನವಲನ) ಮುಂದಿನ ಪ್ರಯೋಗಗಳಲ್ಲಿ ಸರಿಪಡಿಸಿಕೊಳ್ಳುವುದರ ಮೂಲಕ ನಿರ್ದೇಶಕರಿಗೆ ಒಳ್ಳೆಯ ಭವಿಷ್ಯವಿದೆ.





ಗ್ರಾಮೀಣ ಜಗತ್ತಿನಲ್ಲಿ ವ್ಯಕ್ತಿಯ ಅನನ್ಯತೆಗೆ ಯಾವ ಮಹತ್ವವೂ ಇಲ್ಲ. ಇಟ್ಹಾಂಗ ಇರಬೇಕು ಎಂದು ಹೇಳುವ ಗೆಳತಿಯ ಮಾತು ಇದಕ್ಕೆ ದನಿ ಕೊಡುತ್ತದೆ. ನಿಮ್ಮಪ್ಪ ಅವ್ವ ಕೆರೆಗೆ ಭಾಗೀರಥೀಯನ್ನು ಹಾರವಾಗಿಕೊಟ್ಟರು ಎಂದು ಅವಳು ಗಂಡ ಮಾದೇವರಾಯನಿಗೆ ಹೇಳಿದರೂ, ಅವನು ಮುನ್ನೂರು ವರಹ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ ಮುತ್ತೈದೆ ಎಲ್ಲಿ ಹೋದೆ ಎಂದು ಗೋಳಾಡುತ್ತಾ ತಾನೂ ಕೆರೆಗೆ ಹಾರವಾಗುತ್ತನೆಯೇ ಹೊರತು , ಸೈನಿಕನಾದ ಅವನು ತನ್ನನ್ನು ಕೇಳದೆಯೇ ತನ್ನ ಮಡದಿ ಭಾಗೀರಥಿಯನ್ನು ಹಾರವಾಗಿ ಕೊಡಲು ನಿಶ್ಚೈಸಿದ ತಂದೆ ತಾಯಿಗಳ ವಿರುದ್ಧ ತುಟಿ ಪಿಟಕ್ ಎನ್ನುವುದಿಲ್ಲ. ಭಾಗೀರಥಿಯ ನೋವಿನೊಂದಿಗೆ ಅಸಹಾಯಕತೆಯೊಂದಿಗೆ ಪಡಿಮಿಡಿಯುವವರು ಯಾರೂ ಇಲ್ಲ. ಇದನ್ನು ನಿರೂಪಿಸುವ ಜನಪದ ಕವಿ ಆ ಸಮುದಾಯದ ಭಾಗವೇ ಆಗಿರುವುದರಿಂದ ಅವಳ ನೋವಿನ ಅರಿವಿದ್ದರೂ ಅವನೂ ಅಸಹಾಯಕನಾಗಿದ್ದಾನೆ.


ಇಂತಹ ಒಂದು ನಾಟಕವನ್ನು ಪ್ರದರ್ಶಿಸಿದ ಅನುಜಾ ಮಹಿಳಾ ತಂಡಕ್ಕೆ ಅಭಿನಂದನೆಗಳು.

**ರಘುನಾಥ್**

## ಮುಂಬರುವ ಕಾರ್ಯಕ್ರಮಗಳು:

| | |
|---|---|
| ಶನಿವಾರ | |
| 20.10.2012 ಸಂಜೆ 5.00ಕ್ಕೆ | ಶಾರದಾ ಪೂಜೆ |
| ಸಂಜೆ 7.00ಕ್ಕೆ | ಶ್ರೀ. ಗುಂಡ್ಮಿ ರಘುರಾಮ್ ಭಾಗವತರ ಯಕ್ಷಗಾನ – "ಹೂವಿನ ಕೋಲು" 'ಜಾಂಬವತಿ ಕಲ್ಯಾಣ' ಮತ್ತು 'ದೇವಿ ಮಹಾತ್ಮೆ' ಮಕ್ಕಳ ಯಕ್ಷಗಾನ ಪ್ರದರ್ಶನ |
| ರವಿವಾರ | |
| 21.10.2012 ಸಂಜೆ 7.00ಕ್ಕೆ | "The White Elephant" –A Hindi movie - |
| ಶನಿವಾರ | |
| 27.10.2012 ಸಂಜೆ 7.00ಕ್ಕೆ | ಹಿಂದೂಸ್ತಾನಿ ಸಂಗೀತ ಕು. ಮೌನ ರಾಮಚಂದ್ರ |

## Congratulations



Master Rhishikesh Ramesh Deshpande has stood 152nd in the State Merit List of MHTCET, 2012and secured an admission into the M.B.,B.S. course at L.T.M. Medical college & General Hospital, Sion, Mumbai – 400 022, under his father, a Member of the Association Dr. Ramesh Rangarao Deshpande, who is Professor & Head of the Department of Physiology at the said Institution in August 2012.

Date of Publication : 09.05.2012 RNI No. 040015 / 83
MH / MR / North East / 093 / 2012- 2014 Date of Posting : 10-10-2012




......ಹಾಡುತ್ತಿದ್ದಾರೆ



ಶ್ರೀ ಸ್ವರ್ಣ ಗೌರಿಗೆ ಶ್ರೀಮತಿ ಲಕ್ಷ್ಮೀಸೀತಾರಾಮ್, ಶ್ರೀಮತಿ ಛಾಯಾ ನಾಗರಾಜ್, ಶ್ರೀ ಸೌಮ್ಯರವರು ಆರತಿ ಮಾಡುತ್ತಿರುವುದು




ಗಣೇಶೋತ್ಸವ ಸಂದರ್ಭ ಕರ್ನಾಟಕಿ ......... ಸಂಗೀತ ಮಾಡುತ್ತಿರುವುದು

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 ● Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938